ಅಚಲ

ತಿಂಗಳ ಪತ್ರಿಕೆ

ಬಿಡಿಪ್ರತಿ : 4 ರೂ.

ಫೆಬ್ರವರಿ - 2005

ಒಳಗೇನಿದೆ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,
ಬೆಂಗಳೂರು

ಅಚಲ

ಸಂಪುಟ - 20 ಸಂಚಿಕೆ : 1

ಸಂಪಾದಕ ಮಂಡಲಿ

ಎನ್. ಗಾಯತ್ರಿ
ನೇಮಿಚಂದ್ರ, ದೇವಿ,
ಶಾಂತಾ ನಾಗರಾಜ್
ಹೆಚ್. ಎನ್. ಗೀತಾ
ಹೇಮಲತಾ ಮಹಿಷಿ

ಪ್ರಕಾಶಕರು
ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10/- ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಅಚಲ-20

ಆತ್ಮೀಯರೇ,

ಇಪ್ಪತ್ತು ವರ್ಷಗಳನ್ನು ಮುಗಿಸಿದ 'ಅಚಲ' ಈಗ ನಿಮ್ಮೊಂದಿಗೆ ಅದರ ಸಂತೋಷವನ್ನು ಹಂಚಿಕೊಳ್ಳಲು ಬಯಸುತ್ತದೆ. ಅದರ ಸಂತೋಷ ಮತ್ತಷ್ಟು ಹೆಚ್ಚಾಗಬೇಕಾದರೆ ಮತ್ತು ನಿರಂತರವಾಗಿ ಮುಂದುವರಿಯುತ್ತಿರಬೇಕಾದರೆ ನಿಮ್ಮ ಸಹಕಾರ ನಮಗೆ ಅಗತ್ಯವಾಗಿ ಬೇಕು. ಪತ್ರಿಕೆಯ ಚಂದಾದಾರರಾಗಿ ಓದುಗರಾಗಿ ಪ್ರೋತ್ಸಾಹಿಸಿ, ಲೇಖಕರಾಗಿ ನಿಮ್ಮ ಅಭಿಪ್ರಾಯವನ್ನು ಹಂಚಿಕೊಳ್ಳಿ. ಆರ್ಥಿಕವಾಗಿ ನೆರವು ನೀಡಿ ಅದನ್ನು ಗಟ್ಟಿಗೊಳಿಸಿ. ಅಚಲ ಪತ್ರಿಕೆಯನ್ನು ನಿಮ್ಮ ಸ್ನೇಹಿತರಿಗೆ ಪರಿಚಯಿಸಿ 'ಅಚಲ'ದ ಬಳಗವನ್ನು ವಿಸ್ತರಿಸಿ.

ಅಚಲ ವಿಳಾಸ

108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಸಂಪಾದಕೀಯ

ಪುರುಷಶಾಹಿ ಸಮಾಜದಲ್ಲಿ ಮಹಿಳಾ ಹತ್ಯೆಗಳು

ಭಾರತದಲ್ಲಿ ಹಿಂಸೆ ಮತ್ತು ಮಹಿಳೆ - ಇವೆರಡೂ ಸಮಾನಾಂತರ ಶಬ್ದವೇನೋ ಎನ್ನುವಷ್ಟರ ಮಟ್ಟಿಗೆ ನಮ್ಮ ಸಮಾಜದಲ್ಲಿ ಹಿಂಸೆಯು ವ್ಯಾಪಿಸಿದೆ. ಈ ಹಿಂಸೆಯ ನಂತರದ ಅತ್ಯುಗ್ರ ಸ್ಥಿತಿಯೇ ಹತ್ಯೆ. ಹೆಣ್ಣಿನ ದೇಹದ ಮೂಲಕವೇ ಅವಳನ್ನು ಗುರುತಿಸುವುದು, ಆ ದೇಹದ ಮೇಲೆ ತಮ್ಮ ಹಕ್ಕನ್ನು ಸ್ಥಾಪಿಸುವುದು ಪಿತೃಪ್ರಧಾನ ವ್ಯವಸ್ಥೆಯ ಆಶಯವಾಗಿ ಎಂದು ರೂಪುಗೊಂಡಿತೋ ಅಂದಿನಿಂದಲೇ ಮಹಿಳಾ ಹತ್ಯೆಯೆನ್ನುವುದು ಪುರುಷಶಾಹಿ ಮೌಲ್ಯದ ಭಾಗವಾಗಿ ರೂಪುಗೊಂಡಿದೆ. ಅದಕ್ಕೆ ಮುಖಗಳು ಹಲವಾರು. ಆಶಯ ಮಾತ್ರ ಒಂದೇ ಆಗಿರುತ್ತದೆ. ಸ್ವರೂಪ ಸಂಕೀರ್ಣವಾದಂತೆ ಪರಿಹಾರವು ಬಹುಮುಖಿ ನೆಲೆಯಲ್ಲಿ ನಡೆಯಬೇಕಾಗುತ್ತದೆ. ಪಿತೃವಾಕ್ಯ ಪರಿಪಾಲನೆಗಾಗಿ ಮಾತೃಹತ್ಯೆ ಮಾಡುವ ಪರಶುರಾಮರ ಸಂತತಿಯಿರುವ ನಮ್ಮ ನಾಡಿನಲ್ಲಿ ಮಹಿಳಾ ಹತ್ಯೆಯನ್ನು ಮಾಡಲು, ಸಮರ್ಥಿಸಿಕೊಳ್ಳಲು ಪ್ರಾಚೀನಕಾಲದಿಂದ ಇಂದಿನವರೆಗೂ ನೂರಾರು ನೆಪಗಳುಂಟು. ಸಬೂಬುಗಳುಂಟು. ಧರ್ಮದ ಮುಸುಕು, ಸಂಪ್ರದಾಯದ ಮುಸುಕು, ಕೊನೆಗೆ ಅಧಿಕಾರದ, ರಾಜಕೀಯದ ಮುಸುಕು ಹಾಕಿಕೊಂಡ ಮಹಿಳಾ ಹತ್ಯೆಗಳು ಇಂದು ನಡೆಯುತ್ತಿವೆ.

'ಮಾತೃದೇವೋಭವ' 'ಪಿತೃದೇವೋಭವ' ಎನ್ನುವ ಈ ನಾಡಿನಲ್ಲಿ ಈ ದೈವಗಳೇ ಮೃತ್ಯು ದೇವತೆಯಾಗುವಂತಹ ಸಂದರ್ಭವೊದಗಿರುವುದು ಎಂತಹ ದುರದೃಷ್ಟಕರ. ಇಂದು ದೇಶದ ಹಲವಾರು ಭಾಗಗಳಲ್ಲಿ ನಡೆಯುತ್ತಿರುವ ಹೆಣ್ಣು ಶಿಶುಹತ್ಯೆ ಮತ್ತು ಭ್ರೂಣಹತ್ಯೆಗಳು ಯಾವುದೇ ಮುಸುಕಿಲ್ಲದೆ ನಡೆಯುತ್ತಿರುವುದಕ್ಕೆ ಮುಖ್ಯಕಾರಣ, ಹೆಣ್ಣಿನ ಬಗ್ಗೆ ಈ ಪುರುಷ ಸಮಾಜ ತಾಳಿರುವ ಪಕ್ಷಪಾತ ಧೋರಣೆ. ಅವಳನ್ನು ಕುಟುಂಬದ ಹೊರೆಯಾಗಿ ಶಾಪವಾಗಿ ಪರಿಗಣಿಸಿರುವ ಸ್ಥಿತಿ. ಅಷ್ಟೇ ಅಲ್ಲದೆ ಪುತ್ರನ ಬಗ್ಗೆ ಇರುವ ಅತಿಶಯವಾದ ಪ್ರಾಶಸ್ತ್ಯ. ಇನ್ನು ವರದಕ್ಷಿಣೆಯ ಬ್ರಹ್ಮರಾಕ್ಷಸನ ಘೋರಮುಷ್ಟಿಗೆ ಸಿಕ್ಕಿ ಮದುವೆಗೆ ಮುಂಚೆ ಮತ್ತು ನಂತರದಲ್ಲೂ ಜೀವನವನ್ನು ಕೊನೆಗಾಣಿಸಿಕೊಂಡವರೆಷ್ಟೋ ! ಹಾಗೆಯೇ ವರದಕ್ಷಿಣೆಯ ದುರಾಸೆಯ ಬೆಂಕಿಯಲಿ ಸುಟ್ಟು ಕರಕಲಾದ ಜೀವಗಳೆಷ್ಟೋ ? ಈ ನಾಡಿನಲ್ಲಿ ಹೆಣ್ಣಿನ ಕೊಲೆಯೂ ಕೂಡ ಒಂದು ಸಂಪ್ರದಾಯವಾಗಬಲ್ಲುದು. ಗಂಡನಿಲ್ಲದ ಹೆಣ್ಣಿನ ಅಸ್ತಿತ್ವವನ್ನು ಹಾಗೂ ಅವಳ ಬದುಕಿನ ಅರ್ಥವಂತಿಕೆಯನ್ನು ನಿರಾಕರಿಸುವ ಸಮಾಜ ಗಂಡನ ಶವದೊಂದಿಗೆ ಹೆಂಡತಿಯನ್ನು ಚಿತೆಗೇರಿಸಲು ಮಾಡಿಕೊಂಡ ಸಂಪ್ರದಾಯ ಸತಿ. ಹೆಣ್ಣು ಹುಟ್ಟಿರುವುದೇ ಭೋಗಿಸಲಕ್ಕೆಂದು ಎಂದು ಭಾವಿಸುವ ಸಮಾಜದಲ್ಲಿ ಅತ್ಯಾಚಾರಕ್ಕೊಳಗಾಗಿ ಸಾಯುವ ಮಹಿಳೆಯರು ಅಸಂಖ್ಯ.

ಭಾರತದ ಇತಿಹಾಸದಲ್ಲಿ ಕೋಮುವಾದದ ಬಿಸಿಗೆ ಸಿಕ್ಕು ಕೋಮುಗಲಭೆಯಲ್ಲಿ ಪ್ರಾಣತೆತ್ತ, ಅಸು ನೀಗಿದ, ಅತ್ಯಾಚಾರಕ್ಕೊಳಗಾದವರಲ್ಲಿ ಮಹಿಳೆಯರೇ ಹೆಚ್ಚು. ಯಾವುದೇ ಧರ್ಮದ ಪುರುಷಾಹಂಕಾರಕ್ಕೆ ಬಲಿಯಾಗುವರಲ್ಲಿ ಮಹಿಳೆಯರು ಮೊದಲು. ಇನ್ನು ಕೌಟುಂಬಿಕ ದೌರ್ಜನ್ಯದಡಿ ನರಳಿ ಸಾಯುವ ಮಹಿಳೆಯರ ಲೆಕ್ಕ ಕೂಡ ಸಿಗುವುದಿಲ್ಲ.

ಭಾರತದ ಸಂವಿಧಾನದ ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ ಮೂಲಕ ಕೊಲೆಗಡುಕರನ್ನು ಶಿಕ್ಷಿಸುವ ಅವಕಾಶವಿದ್ದರೂ ಧರ್ಮದ ಹೆಸರಿನಲ್ಲಿ ಹತ್ಯೆಗೆ ಕಾರಣರಾದ ಅಪರಾಧಿಗಳು ನುಸುಳಿ ಹೋಗಬಹುದು ಎಂಬ ಕಾರಣದಿಂದಲೂ ಮತ್ತು ಇಂತಹ ಹತ್ಯೆಗಳನ್ನು ನಿಯಂತ್ರಿಸುವುದಕ್ಕೆಂದು ವಿಶೇಷ ಕಾಯಿದೆಗಳನ್ನು ನಮ್ಮ ನ್ಯಾಯಾಂಗ ತಂದಿದೆ. ಇಂತಹ ವಿಶೇಷ ಕಾನೂನುಗಳನ್ನು ಜಾರಿಗೊಳಿಸುವಲ್ಲಿ ಭಾರತದ ಮಹಿಳಾ ಚಳುವಳಿ ವಿಶೇಷ ಪಾತ್ರವಹಿಸಿದೆ. 1986ರ ವರದಕ್ಷಿಣೆ ವಿರೋಧಿ ಕಾಯಿದೆ, 1987ರ ಸತಿ ನಿಷೇಧ ಕಾನೂನು, 1994ರ ಲಿಂಗ ಪತ್ತೆ ನಿಷೇಧ ಕಾಯಿದೆ ಮುಂತಾದವು ಇವುಗಳಲ್ಲಿ ಕೆಲವು.

ಸರ್ಕಾರ ಮತ್ತು ಸಮಾಜದ ಇಷ್ಟೆಲ್ಲ ಪ್ರಯತ್ನಗಳ ನಡುವೆಯೂ ಈ ಸಮಸ್ಯೆಗಳ ಪರಿಹಾರದ ಹೋರಾಟಕ್ಕೆ ಸೂಕ್ತ ಸೈದ್ಧಾಂತಿಕ ಸ್ಪಷ್ಟತೆಯಿಲ್ಲದಿದ್ದರೆ ಹೋರಾಟಕ್ಕೆ ಯಶಸ್ಸು ಸಿಗುವುದಿಲ್ಲ. ಪುರುಷ ಪ್ರಧಾನ ಸಮಾಜದ ಡೋಂಗಿತನವನ್ನು ಮೊದಲು ಬಯಲಿಗೆಳೆಯಬೇಕು. ಹಾಗೆಯೇ ಪಕ್ಷ ರಾಜಕಾರಣದಲ್ಲಿ ಲಿಂಗಕ್ಕೆ ನ್ಯಾಯ ಸಿಗದೇ ಹೋಗಬಹುದಾದ ಅನಾಹುತವೂ ಇರುತ್ತದೆ. ಇವೆಲ್ಲವುಗಳ ಬಗ್ಗೆ ಜಾಗೃತರಾಗಿ ಲಿಂಗ ನ್ಯಾಯಕ್ಕಾಗಿ ನಡೆಸುವ ಹೋರಾಟ ನಡೆದರೆ, ಅದರಿಂದ ಈ ಸಮಸ್ಯೆಯ ಕಾವನ್ನು ಕಡಿಮೆ ಮಾಡಬಹುದು.

– ಎನ್. ಗಾಯತ್ರಿ

ಮಾರುಕಟ್ಟೆ ಮೌಲ್ಯಗಳು ಮತ್ತು ಮಹಿಳೆ

-ಡಾ॥ ಮಲ್ಲಿಕಾ ಘಂಟಿ

ಪ್ರಾಚೀನ ಕಾಲದಿಂದ ಇಂದಿನವರೆಗೂ ಮಾರುಕಟ್ಟೆಗೆ ಒಂದು ಆರೋಗ್ಯಕರವಾದ ನೀತಿ ಸಂಹಿತೆಯನ್ನು ರೂಪಿಸುವ ವಿವೇಕ ಮತ್ತು ವ್ಯವಧಾನ ಸಾಮುದಾಯಿಕ ಜವಾಬ್ದಾರಿಯಾಗಿ ಯಾವ ಕಾಲದಲ್ಲಿ ಯಾರಲ್ಲಿಯೂ ಕಾಣಿಸಿಕೊಂಡಿಲ್ಲ. ಆರೋಗ್ಯಕರ ಸಮಾಜಕ್ಕೆ ಲಾಭಗಳಿಕೆಯ ವ್ಯವಹಾರಿಕತೆಯನ್ನು ನಿಯಂತ್ರಿಸುವ ಶಕ್ತಿಯಿಲ್ಲದಿದ್ದರೆ ಇಡೀ ವ್ಯವಸ್ಥೆಯೇ ನರಳಬೇಕಾಗುತ್ತದೆ. ಮಾರುಕಟ್ಟೆ ಸಂಸ್ಕೃತಿ ಗಳಿಕೆಯ ತೂಗುಕತ್ತಿಯನ್ನು ನಿರಂತರ ಗ್ರಾಹಕನ ಮೇಲೆ ಬೀಸುತ್ತಿರುತ್ತದೆ. ಇದರಿಂದ ವ್ಯಕ್ತಿ ಸಮಾಜಗಳು ಹಲವಾರು ಅಪಾಯಗಳಿಗೆ ಒಳಗಾಗಬೇಕಾಗುತ್ತದೆ.

ಭಾರತೀಯ ಸಮಾಜದಲ್ಲಿ ಹೆಣ್ಣನ್ನು ವ್ಯಕ್ತಿಯೆಂದು ಪರಿಗಣಿಸಿದ ಉದಾಹರಣೆಗಳಿಲ್ಲ. ಚರಿತ್ರೆಯುದ್ದಕ್ಕೂ ಹೆಣ್ಣನ್ನು ವಸ್ತು ಮುಖೇನವೆ ಗುರುತಿಸುವುದು ಯಾವ ಮಹಾತ್ಮರಿಗೂ ಅಪರಾಧವಾಗಿ ಕಾಣಿಸಿಲ್ಲ. ಗಂಡಸು ಸಂಪಾದಿಸಬಹುದಾದ ನಿರ್ಜೀವ ಭೌತಿಕ ವಸ್ತುವಿನಲ್ಲಿ ಹೆಣ್ಣನ್ನು ಪ್ರಭುತ್ವ ಮತ್ತು ಧರ್ಮ ಸತ್ತೆಗಳು ನಿರ್ಲಜ್ಜವಾಗಿ ಸೇರಿಸಿಕೊಂಡು ಬಂದಿರುವ ಬಗ್ಗೆ ಯಾವ ಸಮಾಜ ಸುಧಾರಕನ ಸಂಕಟಕ್ಕೆ ನಿಲುಕದ ಹಾಗೇ ಉಳಿದಿದೆ.

ಸರಕು ಸಂಸ್ಕೃತಿಯ ವಿಶೇಷತೆ ಮತ್ತು ಹಿತ ಅಡಗಿರುವುದು ಹೆಣ್ಣನ್ನು ಬಳಸಿಕೊಳ್ಳುವ ವಿಧಾನದಲ್ಲಿ. ಸಾಮಾಜಿಕವಾಗಿ ಹೆಣ್ಣನ್ನು ಬದುಕಿನುದ್ದಕ್ಕೂ ಅನ್ಯರ ಹಂಗಿನಲ್ಲಿರುವ ಬೆಲೆಯುಳ್ಳ ಪ್ರಾಣಿ, ವಸ್ತುವಾಗಿಸಿರುವ ಸಾಮಾಜಿಕ ಬದುಕಿನ ಸಂರಚನೆಯಲ್ಲಿಯೇ ಅಫೀಮಿನಂತಹ ಧರ್ಮ ಮತ್ತು ಹಿಂಸಾನಂದದ ಪ್ರಭುತ್ವದ ಕ್ರೌರ್ಯ ಗಟ್ಟಿಗೊಂಡಿದೆ. ಇದನ್ನು ಅರ್ಥಮಾಡಿಕೊಳ್ಳುವುದರ ಮೂಲಕ ಸ್ತ್ರೀ ಬದುಕಿನ ಸಂಕಥನವನ್ನು ಕಟ್ಟಿಕೊಳ್ಳಲು ಸಾಧ್ಯ. ಮಾರುಕಟ್ಟೆಯಲ್ಲಿ ಮಹಿಳೆ ಕಳೆದುಹೋಗುತ್ತಿರುವ ಸಂಗತಿ ನಮಗೇನೂ ಹೊಸ ಸಂಗತಿಯಲ್ಲ. ನಮ್ಮ ಪುರಾಣ ಪುಣ್ಯ ಪುರುಷರ ಬೆನ್ನ ಹಿಂದೆ, ಕಣ್ಣ ಮುಂದೆ, ಕಾಲ ಕೆಳಗೆ, ಕಾಲಮೇಲೆ ಹೆಣ್ಣನ್ನು ಇಟ್ಟುಕೊಂಡು ದಮನಿಸಿದ ಸಂಗತಿಗಳು ನಮ್ಮ ಸಾಮಾಜಿಕ ಮೌಲ್ಯಗಳೆಂದು ಧರ್ಮಮುದ್ರೆಯ ಮೂಲಕ ನಿರಂತರ ಭಕ್ತಿಪೂರ್ವಕವಾಗಿ ಪಠಿಸುವ ಪರಿಪಾಠ ಇಂದಿಗೂ ನಿಂತಿಲ್ಲ.

ಮಹಾಭಾರತದಲ್ಲಿ ಧರ್ಮರಾಯ ಕೈಹಿಡಿದ ಹೆಂಡತಿ ದ್ರೌಪದಿಯನ್ನು ಹಿರಿಯರ ಸಮ್ಮುಖದಲ್ಲಿ ಜೂಜಿನಲ್ಲಿ ಪಣಕ್ಕಿಟ್ಟು ಸೋಲುವುದರ ಮೂಲಕ ಧರ್ಮವನ್ನು ಎತ್ತಿ ಹಿಡದ ಕಥೆಯನ್ನು ರಸವತ್ತಾಗಿ ಹೇಳುವ ಮುಂದೆ ದ್ರೌಪದಿಯ ಅಸಹಾಯಕತೆ ನೆನಪಾಗುವುದೆಯಿಲ್ಲ. ಸಪ್ತಪದಿ ತುಳಿದು ಸುಖದುಃಖದಲ್ಲಿ ಸಮವಾಗಲೆಂದು ಕೈಹಿಡಿದು ಬಂದ ಹೆಂಡತಿಯನ್ನು ತುಂಬಿದ ಸಭೆಯಲ್ಲಿ ನಿಲ್ಲಿಸಿ ಪಾತಿವ್ರತ್ಯ ಪರೀಕ್ಷಿಸುವ ರಾಮ ಮಹಾತ್ಮನೆಂದು ಕರೆಯಿಸಿಕೊಂಡಿದ್ದರ ಹಿಂದೆ ಸೀತೆಯ ದಯನೀಯತೆ ಮರೆತು ಹೋಗುತ್ತದೆ. ಸತ್ಯಕ್ಕಾಗಿ ಹರಿಶ್ಚಂದ್ರ ಹೆಂಡತಿಯನ್ನು ಮಾರುವಾಗ ಚಂದ್ರಮತಿ ಅನುಭವಿಸಿದ ಸಂಕಟದ ಅರಿವು ಯಾರ ಹೃದಯಕ್ಕೂ ತಟ್ಟುವುದಿಲ್ಲ. ಯಯಾತಿ ಮಹಾರಾಜ ತನ್ನ ಹೆಸರುಳಿಸಿಕೊಳ್ಳುವ ಸಲುವಾಗಿ ದಾನವಾಗಿ ಕುದುರೆ ಕೇಳಿದ ಗಾವಲನಿಗೆ ಹೊಟ್ಟೆಯಲ್ಲಿ ಹುಟ್ಟಿದ ಮಗಳು ಮಾಧವಿಯನ್ನು ದಾನವಾಗಿ ನೀಡಿದ್ದು ಉಳಿದಿರುವುದೇ ಹೊರತು ಮಾಧವಿಯ ಛಿದ್ರಗೊಂಡ ಕನಸುಗಳು ಮರೆತುಹೋಗಿವೆ.

ಗುರುವಿಗೆ ದಕ್ಷಿಣೆ ಕೊಟ್ಟು ಗುರುಭಕ್ತಿಯನ್ನು ಮೆರೆಯುವ ಸಲುವಾಗಿ ಗಾಲವ ರಾಜರಿಂದ ರಾಜರಿಗೆ ಮಾಧವಿಯನ್ನು ಹೆತ್ತುಕೊಡುವ ಯಂತ್ರದಂತೆ ಮಾರಿ ಕುದುರೆ ಪಡೆಯುತ್ತ ಹೋದ ಸಂಗತಿ ನಮಗೆ ಅಮಾನುಷವೆನಿಸಲೇ ಇಲ್ಲ. ಮಹತ್ವಾಕಾಂಕ್ಷೆಯ ಮತ್ತಿನಲ್ಲಿ ಗಂಡಸು ಹೆಣ್ಣನ್ನು ನಿರಂತರ ದಮನಿಸುತ್ತ ಬಂದಿರುವ ಸಂಗತಿ ಸಾಮಾಜಿಕವಾಗಿ ಮೌಲ್ಯೀಕರಣಗೊಂಡಿರುವುದರಿಂದ ಇಂದಿಗೂ ಹೆಣ್ಣನ್ನು ದಾನಮಾಡುವ, ಒತ್ತೆ ಇಡುವ, ಕೈಗಡ ಕೊಡುವುದೆಲ್ಲ ನ್ಯಾಯ ಸಮ್ಮತವಾಗಿಯೇ ಮುಂದುವರಿದಿದೆ. ಇದು ಒಂದರ್ಥದಲ್ಲಿ ಅಂದರೆ ಧಾರ್ಮಿಕ ಪರಿಧಿಯ ಮಾರುಕಟ್ಟೆಯ ಸಂಸ್ಕೃತಿಯನ್ನು ತೋರಿಸುವಂತದ್ದ. ಇಂದು ಈ ಧೋರಣೆ ಉದ್ಯಮವಾಗಿ ಬೆಳೆದಿರುವುದರಿಂದ ಎಲ್ಲ ವಸ್ತುವಿನ ಮಾರ್ಕೆಟ್ ಕುದುರಿಸುವ ಪ್ರಬಲ ಸಾಧನವಾಗಿ ಹೆಣ್ಣನ್ನು ಬಳಸಿಕೊಳ್ಳಲಾಗುತ್ತಿದೆ.

ಈ ಎಲ್ಲ ಪುರಾಣ ಕಥೆಗಳು ಬರೀ ಹೇಳಲು, ಕೇಳಲು ಇರುವಂತವುಗಳಾಗಿದ್ದರೆ ಸಮಸ್ಯೆಯಿರಲಿಲ್ಲ. ಆದರೆ ಇಂತಹ ಘಟನೆಗಳು ಮತ್ತೆ ಮತ್ತೆ ನಿತ್ಯ ಬದುಕಿನಲ್ಲಿ ಪುನರಾವರ್ತನೆಗೊಳ್ಳುತ್ತಿರುವ ಮತ್ತು ಅದನ್ನು ಸಮುದಾಯಗಳ ಸಂಸ್ಕೃತಿಯ ಸಂಗತಿಯಾಗುತ್ತಿರುವ ಬಗ್ಗೆ ಆತಂಕಪಡುವಂತಾಗಿದೆ. ಮೇಲ್ವರ್ಗ, ಜಾತಿಯಲ್ಲಿ ಯೋನಿ ಶುದ್ಧಿಗಾಗಿ ಹುಟ್ಟಿಕೊಂಡ ಪಾತಿವ್ರತ್ಯದ ಪರಿಕಲ್ಪನೆ ಕ್ರಮೇಣ ಶೂದ್ರ ಮತ್ತು ದುಡಿಯುವ ವರ್ಗದಲ್ಲಿ ಬೇರುಬಿಡುತ್ತಿರುವುದು ಆಘಾತಕಾರಿ ವಿಷಯವಾಗಿದೆ. ಮೇಲ್ವರ್ಗ ಜಾತಿಗಳು ಲಾಭದಾಯಕ ನೆಲೆಯಲ್ಲಿ ಅನುಕೂಲಸಿಂಧು ಪ್ರವೃತ್ತಿಯನ್ನು ಎಚ್ಚರವಾಗಿಟ್ಟುಕೊಂಡಿರುವುದರಿಂದ ಈ ಸಂಸ್ಕೃತಿಯಲ್ಲಿ ಚಲನಶೀಲತೆ ಉಂಟಾಗುವ ಸಾಧ್ಯತೆಗಳು ಕಾಣಿಸಿಕೊಳ್ಳುತ್ತದೆ.

ಆದರೆ ಕೆಳಜಾತಿ, ವರ್ಗಗಳಲಿ ಚಾಚಿಕೊಂಡಿರುವ ಸ್ತ್ರೀ ಕಾರಣದ ನಂಬಿಕೆಗಳು ಆಳವಾಗಿ ಬೇರು ಬಿಡುತ್ತ

ಸ್ಥಾವರಗೊಂಡು ತಲೆಮಾರಿನಿಂದ ತಲೆಮಾರಿಗೆ ಪಿತ್ರಾರ್ಜಿತ ಆಸ್ತಿಯಂತೆ ರಕ್ಷಿಸಲ್ಪಡುವ ಕಾರಣ ಈ ವರ್ಗದಲ್ಲಿ ಹೆಂಗಸಿನ ಮೇಲಿನ ಕ್ರೌರ್ಯ ಬೀದಿಯಲ್ಲಿ ನಡೆಯುವುದು ಸಹ ಸಹಜವೆನಿಸಿಕೊಳ್ಳುತ್ತಿದೆ. ಅದು ಆ ವರ್ಗದ ಸಂಸ್ಕೃತಿಯೆಂದು ಕರೆಯಿಸಿಕೊಳ್ಳುತ್ತದೆ. ಹೀಗಾಗಿ ಮೇಲ್ವರ್ಗ, ಮೇಲ್ ಜಾತಿಯ ಯಜಮಾನ ಸಂಸ್ಕೃತಿ ತನ್ನ ಹಿತಕ್ಕಾಗಿ ಬಳಸಿಕೊಂಡು ಎಸೆದ ಸಿಪ್ಪೆಯನ್ನು ಕೆಳವರ್ಗದ ಶೂದ್ರ ಗಂಡಸರು ಅದನ್ನು ಆಸೆಬುರುಕತನದಿಂದ ದವಡೆಗೆ ಹಾಕಿ ನುರಿಸಿ ನುರಿಸಿ ತಿನ್ನುವರು. ಇದರಿಂದ ಮಹಿಳೆ ತನ್ನೆಲ್ಲ ಬದುಕು, ಭಾಗ್ಯವನ್ನು ಗಂಡಸು ಉಗುಳುವ ಎಂಜಲಿನಲ್ಲಿ ಕಾಣುವುದೆಲ್ಲ ಹಣೆಬರಹವೆಂದು ಭೂಮಿ ತೂಕ ಉಳಿಸಿಕೊಂಡಿರುವಳು. ಹೆಣ್ಣಿನ ಮತ್ತು ಬಲಹೀನ ಗಂಡಸರ ದಮನಕ್ಕಾಗಿ ಸಂಸ್ಕೃತಿಯ ಹೆಸರಿನಲ್ಲಿ ಹುಟ್ಟಿರುವ ವಿಷಯವನ್ನೆಲ್ಲ ಹೆಣ್ಣು ಅತ್ಯಂತ ಶ್ರದ್ಧೆಯಿಂದ ಪಾಲಿಸಿಕೊಂಡು ಹೋಗುವ ರೀತಿಯ ಬಗ್ಗೆಯು ವಿಚಾರ ನಡೆಯಬೇಕಾಗಿದೆ.

ಪ್ರಾಚೀನ ಭಾರತದ ಕೌಟುಂಬಿಕ ಮತ್ತು ಸಮಾಜದಲ್ಲಿಯ ಹೆಣ್ಣನ್ನು ಗ್ರಾಹಕ ಸಂಸ್ಕೃತಿಯ ಭಾಗವಾಗಿಯೇ ನೋಡಲಾಗಿದೆ. ಕೊಳ್ಳುಬಾಕ ಸಂಸ್ಕೃತಿಯಿಂದ ಶೋಷಣೆಗೊಳಪಡುತ್ತಲೇ ಆ ಸಂಸ್ಕೃತಿಯ ರಕ್ಷಕಳಾಗಿಯೂ ಅನಾದಿ ಕಾಲದಿಂದಲೂ ಅದೇ ವ್ಯಕ್ತಿತ್ವವನ್ನು ಉಳಿಸಿಕೊಂಡಿರುವುದೆಲ್ಲ ಸ್ತ್ರೀ ಸಹಜ ಸ್ವಭಾವವೆಂದು ಕರೆದು ಮತ್ತೆ ಮತ್ತೆ ಅದನ್ನು ಸಾಮಾಜಿಕ ಉದಾಸೀನತೆಗೆ ಒಳಪಡಿಸಲಾಗಿದೆ. ಬಂಗಾರದ ಜಿಂಕೆಯನ್ನು ಮುಂದಿಟ್ಟು ಸೀತೆಯನ್ನು ಅಪಹರಿಸಿದ್ದರ ಹಿಂದೆ ರಾವಣನಲ್ಲಿಯೂ ಈ ವ್ಯಾಪಾರಿ ಸಂಸ್ಕೃತಿ ಚಲಾವಣೆಗೊಂಡಿದೆ.

ನಮ್ಮ ರಾಜಮಹಾರಾಜರುಗಳೆಲ್ಲ ಯುದ್ದದಲ್ಲಿ ಗೆದ್ದಾಗ ಮಾಡಿದ ಮೊದಲ ಕೆಲಸ ಅರಮನೆಯ ಹೆಣ್ಣು ಮಕ್ಕಳನ್ನು ಹೊತ್ತೊಯ್ಯುವುದು ಸಹ ಇದೇ ಧೋರಣೆಯಿಂದ. ಶೃಂಗೇರಿಯ ಮಠದಲ್ಲಿ ಶೂದ್ರ ಸ್ತ್ರೀ ಗೋದಾವರಿಯನ್ನು ಮಾರಿದ ದಾಖಲೆ ಕಡತಗಳಲ್ಲಿ ಮಿಂಚುತ್ತಿದೆ. ಇಂದಿಗೂ ಗಂಡಸಿನ ಅಹಮ್ಮಿಕೆಗೆ ಪೆಟ್ಟು ಬೀಳುವುದೆಲ್ಲ ಆತನ ಒಡೆತನದಲ್ಲಿರುವ ಹೆಂಗಸರನ್ನು ಕುರಿತು ಮಾತನಾಡಿದಾಗ ಮಾತ್ರ.

ನಮ್ಮ ಸುತ್ತಮುತ್ತಲೂ ನಡೆಯುತ್ತಿರುವ ಘಟನೆಗಳಿಗೆ ಒಂದಿಲ್ಲಾ ಒಂದು ರೀತಿಯಲ್ಲಿ ಹೆಣ್ಣನ್ನು ತಳುಕು ಹಾಕಲಾಗಿರುತ್ತದೆ. ಹೆಣ್ಣನ್ನು ಮಾರುವ, ಕೊಳ್ಳುವ, ಪಣಕ್ಕಿಡುವ, ಕದ್ದು ಪರಾರಿ ಆಗುವ ವಿಷಯಗಳೆಲ್ಲ ಮಾರುಕಟ್ಟೆಯ ಸಂಸ್ಕೃತಿಯ ಇನ್ನೊಂದು ರೂಪ. ಅಷ್ಟೇ ಅಲ್ಲ ಹೆಣ್ಣನ್ನು ನಿರ್ಜೀವ ವಸ್ತುವಾಗಿ ಸಂಬೋಧಿಸುವುದನ್ನು ಕಾಣಬಹುದು. ಇಂದಿಗೂ ಅದು, ಇದು ಎಂದೆ ಕರೆಯಲಾಗುತ್ತದೆ. ಅಷ್ಟೇ ಅಲ್ಲ ಎತ್ತು ಕತ್ತೆಗಳನ್ನು ಓಡಿಸಿಕೊಂಡು ಹೋದರು ಎನ್ನುವಂತೆ ಹೆಣ್ಣನ್ನು ಓಡಿಸಿಕೊಂಡು ಹೋಗಲಾಯಿತು ಎಂದು ಕರೆಯುವುದನ್ನೆಲ್ಲ ನೋಡಿದಾಗ ಹೆಣ್ಣಿನ ಇರುವಿಕೆಯನ್ನು ಸಾಂಸ್ಕೃತಿಕವಾಗಿ ಹೇಗಿದೆಯೆಂಬುದನ್ನು ಮತ್ತೆ ಮತ್ತೆ ವೇದಪುರಾಣಗಳನ್ನು ನಿಷೆಗಾಗಿ ಬಳಸಬೇಕಾಗಿಲ್ಲ.

ಇಂದು ಜಾಗತೀಕರಣ, ಖಾಸಗೀಕರಣ, ಉದಾರೀಕರಣ ಕಾರಣಗಳಿಂದ ಅಭಿವೃದ್ಧಿಶೀಲ ದೇಶಗಳು ತಮ್ಮ ಬಹುಮುಖಿ ಅಸ್ತಿತ್ವವನ್ನು ಕಳೆದುಕೊಳ್ಳುವ ಅಪಾಯದಲ್ಲಿವೆ. ವ್ಯಾಪಾರೀ ಉದ್ದೇಶದಿಂದ ಬರುವ ವ್ಯಕ್ತಿ-ಸಂಗತಿಗಳೆಲ್ಲ ಬರೀ ಲಾಭದ ಮೇಲೆ ಕಣ್ಣಿಟ್ಟಿರುತ್ತವೆ. ಲಾಭಗಳಿಕೆಗಾಗಿ ಜೀವ ವಿರೋಧಿ ತಂತ್ರಗಳನ್ನೆಲ್ಲ ಯಥೇಚ್ಛವಾಗಿಯೇ ಬಳಸುತ್ತವೆ. ಐವತ್ತು ವರ್ಷದ ಹಿಂದೆ ಭಾರತಕ್ಕೆ ಕಾಲಿಟ್ಟ ಬ್ರಿಟಿಷರ ಕೈಯಲ್ಲಿ ತಕ್ಕಡಿ ಮಾತ್ರವಿತ್ತು ಎಂಬುದನ್ನು ನೆನಪಿಸಿಕೊಳ್ಳಬೇಕಾಗಿದೆ. ಇಂದು ಮತ್ತೆ ಅದೇ ಅಪಾಯದಲ್ಲಿ ದೇಶ ಸಿಲುಕುತ್ತಿದೆ. ವ್ಯಕ್ತಿ ಹಿತಾಸಕ್ತಿಯ ರಾಜಕಾರಣಕ್ಕೆ ಯಾವುದೇ ತಾತ್ವಿಕ ಬದ್ಧತೆಯಿಲ್ಲದೆ ಇರುವುದರಿಂದ ಏನೆಲ್ಲ ಆಪತ್ತುಗಳನ್ನು ಆಹ್ವಾನಿಸಿದ್ದೇವೆ. ವಿಶ್ವವಾಣಿಜ್ಯ ನೀತಿಗೆ ಒಪ್ಪಿಗೆ ನೀಡುವಾಗ ನಮ್ಮ ದೇಶದ ಆರ್ಥಿಕ, ಸಾಮಾಜಿಕ ಹಿನ್ನೆಲೆಯ ಅಸ್ತಿತ್ವಕ್ಕೆ ಧಕ್ಕೆ ಭವಿಷತ್ತಿನಲ್ಲಿ ಬರಬಹುದು ಎಂಬ ಮುಂಜಾಗರೂಕತೆ, ಮುಂದಾಲೋಚನೆಗಳಿಲ್ಲದೆ ವಧಾಸ್ಥಾನಕ್ಕೆ ಬಂದು ನಿಂತಿರುವೆವು. ಬಹುರಾಷ್ಟ್ರೀಯ ಕಂಪನಿಗಳಿಗೆ ರತ್ನಗಂಬಳಿಯನ್ನು ಹಾಸಿ ನಡುಮನೆಗೆ ಕರೆದುಕೊಂಡಿದ್ದೇವೆ. ಹೀಗೆ ಬಂದವರಿಗೆ ನಮ್ಮ ಮನೆಯ ಹೆಂಗಸರಿಂದ ರಾಜೋಪಚಾರ ನೀಡಲು ಭ್ರಮೆ ಮತ್ತು ದುರಾಸೆಯ ಒತ್ತಡಗಳನ್ನು ಹೇರಿದ್ದೇವೆ.

ಈ ಜಾಗತೀಕರಣ ಪ್ರಕ್ರಿಯೆಯಿಂದ ಬಹುಸಂಖ್ಯಾತ ದುಡಿವ ವರ್ಗ ಮತ್ತು ಮಹಿಳೆಯರು ಅಗ್ಗದ ವಸ್ತುಗಳಾಗಿ ಬಳಕೆಗೊಳ್ಳುತ್ತಿರುವ ಶೋಚನೀಯ ವಾತಾವರಣ ದೇಶದುದ್ದಕ್ಕೂ ಕಾಣಿಸುತ್ತಿದೆ. ಧಾರ್ಮಿಕವಾಗಿಯೇ ಹೆಣ್ಣನ್ನು ಭೋಗಪ್ರದ ಜೀವವೆಂದು ಸಾರಿದ್ದಷ್ಟೇ ಅಲ್ಲಿ ಅದನ್ನು ಸಂಸ್ಕೃತಿಯಾಗಿಯು ಬೆಳೆಸಿಕೊಂಡು ಬರುತ್ತಿರುವೆವು. ಈ ಹಳೆಯ ಪುರಾಣ ಮೂಲದ ಸ್ತ್ರೀ ಮಾದರಿಗಳು ಇಂದು ಸಾಣೆ ಹಿಡಿಯಲ್ಲಿಟ್ಟು ಹೊಸ ರೂಪದಲ್ಲಿ ತಳುಕು ಬಳುಕಿನಿಂದ ನಾವು ಕೊಳ್ಳುವ ವಸ್ತುಗಳಿಗೆ ಕಿರುನಗೆ ಚಿಮ್ಮಲು ನಿಂತಿರುವಳು.

ಬಂಡವಾಳ ಹೂಡುವ ಬಹುರಾಷ್ಟ್ರೀಯ ಕಂಪನಿಗಳು ಮತ್ತು ಸ್ವದೇಶಿ ಬಂಡವಾಳಶಾಹಿಗಳು ರಾಷ್ಟ್ರದ ಆರ್ಥಿಕ ಸ್ವಾಯತ್ತತೆ, ಸ್ವಾವಲಂಬನೆಯ ನೆಲೆಗಳನ್ನು ಕ್ರಮೇಣ ನಿಷ್ಕ್ರಿಯಗೊಳಿಸುತ್ತಿವೆ. ಇದಕ್ಕಾಗಿ ರಾಜಕೀಯ ಅರಾಜಕತೆಯನ್ನು ಹುಟ್ಟು ಹಾಕುತ್ತದೆ. ಪ್ರಜ್ಞಾವಂತರ ಗಮನ ತನ್ನ ಮೇಲೆ ಬೀಳದಿರುವಂತೆ ಮತೀಯ ಭಯೋತ್ಪಾದಕತೆಯನ್ನು ಪ್ರಚೋದಿಸುತ್ತದೆ. ಜನಸಾಮಾನ್ಯರ ನ್ನೊಳಗೊಂಡ ಹಾಗೇ ಇಡೀ ಜನಸಮುದಾಯಗಳಲ್ಲಿ ಪರಸ್ಪರ ಸಂದೇಹ, ಅಪನಂಬುಗೆಯನ್ನುಂಟು ಮಾಡಿ ಆಂತರಿಕ ನೆಮ್ಮದಿಯನ್ನು ಕಿತ್ತುಕೊಳ್ಳುತ್ತದೆ. ಇದಕ್ಕೆಲ್ಲ ಸ್ತ್ರೀಯನ್ನು ಒಂದಿಲ್ಲಾ ಒಂದು ರೀತಿಯಲ್ಲಿ ತಳುಕುಹಾಕಿರುತ್ತದೆ.

ಇಲ್ಲಿಯ ಬೌದ್ಧಿಕ ಮತ್ತು ಭೌತಿಕ ಸಂಪತ್ತಿನ ಮೇಲೆ ಆಕ್ರಮಣಕಾರಿ ನೀತಿಯನ್ನು ಹೇರುತ್ತದೆ. ಮಹಿಳೆಯರಲ್ಲಿ ಉಪಭೋಗಪ್ರಧವಾದ ಮನೋವೃತ್ತಿಯನ್ನು ಉದ್ದೀಪಿಸುತ್ತದೆ. ದುಡಿಯುವ ವರ್ಗದ ದುಡಿಯುವ ಅವಕಾಶಗಳನ್ನು ಯಂತ್ರಗಳ ಬಾಯಿಗೆ ಒಡ್ಡುತ್ತದೆ. ಹೀಗೆ ಆರ್ಥಿಕ ಅಸಹಾಯಕತೆಯಿಂದ ಬಳಲುವ ಜನವರ್ಗ ವ್ಯಾಪಾರಿ ತಂತ್ರಗಳಿಗೆ ಹೊಸ ಹೊಸ ರೂಪದಲ್ಲಿ ಬಲಿಯಾಗುತ್ತದೆ.

ಮುಂದುವರೆದ ದೇಶಗಳು ಉತ್ಪಾದಿಸುತ್ತಿರುವ ಕಾಂಡೋಂನಿಂದ ಹಿಡಿದು ಮಕ್ಕಳು ತಿನ್ನುವ ಚಾಕೋಲೇಟ್‌ನ ವರೆಗೂ ನಮ್ಮ ದೇಶದಲ್ಲಿ ಮಾರುಕಟ್ಟೆ ಕಳೆದುಕೊಂಡಿರುವ ಕಾರಣಕ್ಕಾಗಿ ಜಾಗತಿಕ ಮಾರುಕಟ್ಟೆಯನ್ನು ಮುಕ್ತವಾಗಿಟ್ಟಿದೆ. ಎಲ್ಲ ರೀತಿಯಿಂದಲೂ ಹಸಿದು ಕುಳಿತಿರುವ ಹಿಂದುಳಿದ ದೇಶಗಳು ದಿಢೀರನೆ ಈ ವ್ಯಾಪಾರಿ ಜಾಲಕ್ಕೆ ಬಿದ್ದು ದೇಶಿಯ ಸಾರ್ವಜನಿಕ ಉದ್ಯಮ ವ್ಯವಹಾರಗಳೆಲ್ಲ ಕುಸಿದು ಹೋಗಿವೆ. ಸರಕಾರಿ, ಸಾರ್ವಜನಿಕ ಉದ್ಯಮಗಳೇ, ಕೃತಕ ನಷ್ಟದ ಕಾರಣಕ್ಕಾಗಿ ಶಾಶ್ವತವಾಗಿ ಬೀಗಜಡಿದು ಖಾಸಗಿಯವರ ಕೈಯಲ್ಲಿ ಬೀಗ ನೀಡುತ್ತಿರುವವು. ಇದರಿಂದ ಮಾರುಕಟ್ಟೆಯ ನೀತಿ ಹೇಗೆ ರೂಪಿಸಲ್ಪಡುತ್ತಿದೆಯೆಂದರೆ 'ಅಕ್ಕನನ್ನು ತೆಗೆದುಕೊಂಡರೆ ತಂಗಿ ಫ್ರೀ' ಎಂದು ರಸ್ತೆ ಬದಿಯಲ್ಲಿ ನಿಂತು ಕೂಗಿ ಕೂಗಿ ಕರೆಯುವಂತಾಗಿದೆ.

ಹೀಗೆ ಗ್ರಾಹಕನಲ್ಲಿ ಅಗ್ಗದರ ಮತ್ತು ಫ್ರೀ ಎನ್ನುವದರ ಆಮಿಷ ತೋರಿಸಿ ತನ್ನ ಉತ್ಪಾದನಾ ವಸ್ತುಗಳನ್ನು ಬಳಸುವಂತೆ ಮಾನಸಿಕ ರೋಗಕ್ಕೆ ಒಳಪಡಿಸಿದರೆ ಮುಗಿದೆ ಹೋಯಿತು. ಮಾನಸಿಕವಾಗಿ ಗುಲಾಮನಾದ ಗ್ರಾಹಕನನ್ನು ನಿರಂತರ ಶೋಷಿಸುವ ವಿಧಾನ ಬಂಡವಾಳಿಗರಿಗೆ ಚೆನ್ನಾಗಿ ತಿಳಿದಿರುತ್ತದೆ. ಹೀಗೆ ತಾನು ಉತ್ಪಾದಿಸಿದ ವಸ್ತುವಿಗೆ ಗ್ರಾಹಕನ ಮನೆಯ ಬಾಗಿಲನ್ನು ತಟ್ಟಲು ಅಗ್ಗದ ಕೂಲಿಯಲ್ಲಿ ಮಹಿಳೆಯರನ್ನು ದುಡಿಸಿಕೊಳ್ಳಲಾಗುತ್ತಿದೆ. ಏಕಕಾಲದಲ್ಲಿ ನಮ್ಮ ಮಹಿಳೆಯರು ಮತ್ತು ನಮ್ಮ ಗಂಡಸರ ಕಿಸೆಯ ಭಾರ ಹಗುರವಾಗುವುದು. ಹೆಣ್ಣಿನ ಸೌಂದರ್ಯ ಬಹುಕಾಲದಿಂದ ಬಲಿಷ್ಟ ಗಂಡಸಿನ ಉಪಭೋಗಕ್ಕಾಗಿ ವೃದ್ಧಿಯಾಗುತಿತ್ತು. ಅದಕ್ಕಾಗಿಯೇ ಒಂದು ವರ್ಗದ ಹೆಣ್ಣನ್ನು ಸಿದ್ಧಗೊಳಿಸಲಾಗುತ್ತಿತ್ತು. ಇಂದು ಸಹ ವಿಶ್ವ ಮಾರುಕಟ್ಟೆಯಲ್ಲಿ ಒಂದು ವಸ್ತುವಿನ ಅಸ್ತಿತ್ವವನ್ನು ಸ್ಥಾಪಿಸಬೇಕಾದರೆ ಹೆಣ್ಣಿನ ಸೌಂದರ್ಯ ದೇಹವೊಂದು ಮುಖ್ಯಪಾತ್ರವಹಿಸುತ್ತದೆ.

ಏಕಕಾಲದಲ್ಲಿ ಇದರಿಂದ ಎಲ್ಲ ವರ್ಗದ ಮಹಿಳೆಯರಲ್ಲಿ ಕೀಳರಿಮೆ ಮತ್ತು ಸೌಂದರ್ಯದ ಬಗ್ಗೆ ಭಯ ಹುಟ್ಟಿಕೊಳ್ಳುತ್ತದೆ. ದೇಹಮುಖಿ ಬದುಕಿನ ಬಗ್ಗೆ ಭ್ರಮೆಯನ್ನು ಸಮಾಜದಲ್ಲಿ ಆಳವಾಗಿ ಬೆಳೆಸಿದಷ್ಟು ವಸ್ತು ಉಪಭೋಗ ಹೆಚ್ಚಾಗುತ್ತಾ ಹೋಗುವುದು. ಅದಕ್ಕಾಗಿಯೆ ಸೌಂದರ್ಯದ ವ್ಯಾಖ್ಯಾನ ದೇಶಿ ಡಿಕ್ಷನರಿಯಿಂದ ವಿದೇಶಿ ಡಿಕ್ಷನರಿಯಲ್ಲಿ ಸೇರಿಕೊಂಡಿದೆ.

ಈ ಶತಮಾನದ ಅಂತ್ಯದಲ್ಲಿ ವಿಶ್ವಸುಂದರಿಯರ ಸ್ಪರ್ಧೆ ಗಲ್ಲಿ ಗಲ್ಲಿಗಳಲ್ಲಿ ನಡೆಯುತ್ತಿದೆ. ಬಹು ಜನಪ್ರಿಯತೆಯನ್ನು ಗಳಿಸಿ ಕೊಂಡಿರುವ ವಿಶ್ವಸುಂದರಿ ಸ್ಪರ್ಧೆಯ ಹಿಂದೆ ಬಂಡವಾಳ ಶಾಹಿಗಳ ಕೈಗಳಿವೆ. ಸಾವಿರಾರು ವರ್ಷಗಳಿಂದ ಪುರಾಣಗಳ ಮೂಲಕ ನಮ್ಮ ನೆತ್ತಿಯ ಮೇಲೆ ಕುಣಿಯುತ್ತಿದ್ದ ಮೇನಕೆ, ತಿಲೋತ್ತಮೆ, ಊರ್ವಶಿಯರು ನಮ್ಮ ಪಾಯಿಖಾನೆಗಳನ್ನು ಬಿಡದ ಹಾಗೆ ಎಲ್ಲೆಂದರಲ್ಲಿ ತಳವೂರಿರುವರು. ಇಷ್ಟು ಶತಮಾನಗಳಲ್ಲಿ ಹುಟ್ಟದ ಸುಂದರಿಯರು ದಿಢೀರನೆ ಈ ಶತಮಾನದ ಅಂಚಿನಲ್ಲಿ ನಮ್ಮಂತಹ ದೇಶದಲ್ಲಿ ದಿಢೀರನೆ ಕಾಣಿಸಿಕೊಂಡಿರುವುದರ ಬಗ್ಗೆ ಆಶ್ಚರ್ಯ ಪಡುವುದೇನೂ ಇಲ್ಲ. ಭುವನ ಸುಂದರಿಯರು, ವಿಶ್ವ ಸುಂದರಿಯರು, ಗಲ್ಲಿ ಗಲ್ಲಿಗಳ ಸುಂದರಿಯರೇ ಮಾರುಕಟ್ಟೆಯ ಬಕಾಸುರನ ಹೊಟ್ಟೆಯಿಂದಲೇ ಉದುರಿದ ಬಿಳಿ ಜಂತುಗಳು. ಈ ಜಂತುಗಳ ಪ್ರಭಾವ ಸಾಂಸ್ಕೃತಿಕವಾಗಿ ವರ್ಣದ ಕೀಳರಿಮೆಯನ್ನು ಹಿಂದುಳಿದ ಎಲ್ಲ ದೇಶಗಳಲ್ಲಿಯೂ ಹುಟ್ಟು ಹಾಕುತ್ತಿದೆ. ಸೂರ್ಯ ಮುಳುಗದ ನಾಡಿನಿಂದ ಬಂದ ಬಿಳಿ ಚರ್ಮದ ಬಣ್ಣ ಜಗತ್ತಿನ ಮೇಲೆ ಆಧಿಪತ್ಯ ಸಾಧಿಸುವ ತನ್ನ ಇರಾದೆಯನ್ನು ಹಲವು ಮೂಲಗಳಿಂದ ಜೀವಂತ ವಾಗಿಟ್ಟುಕೊಂಡಿದೆ.

ಈ ಪಶ್ಚಿಮಾಂಗನೆ ಪೂರ್ವಾಂಗನೆಯ ಸ್ಥಾನವನ್ನು ಕಬಳಿಸುತ್ತಾ ಆಕೆಯನ್ನು ದಾಸಿಯನ್ನಾಗಿ ಮಾಡಿಕೊಳ್ಳುವ ಎಲ್ಲ ಹುನ್ನಾರಗಳು ಜಾಗತೀಕರಣದ ಹೆಬ್ಬಯಕೆಯಾಗಿದೆ. ಅತ್ಯಂತ ಸಂಪ್ರದಾಯಸ್ಥ ಭಾರತೀಯರು ಶಾಲೆ ಕಾಲೇಜುಗಳ ಸಾಂಸ್ಕೃತಿಕ ಚಟುವಟಿಕೆ ಗಳೆಂದರೆ ಸೌಂದರ್ಯ ಸ್ಪರ್ಧೆಗಳು ಎನ್ನುವಂತಹ ವಾತಾವರಣಕ್ಕೆ ಒಗ್ಗಿಕೊಂಡಿರಬೇಕು. ಹಣಗಳಿಸುವ ದಿಢೀರ್ ಮೋಹ ಮನುಷ್ಯ ನಲ್ಲಿ ಲಾಲಸೆಯನ್ನು ತುಂಬಿ ಕ್ರೌರ್ಯವನ್ನು 'ನಿಸರ್ಗನಿಯಮಕ್ಕೆ' ಹೋಲಿಸುತ್ತಿದೆ. ಇಂತಹ ಸಾಂಸ್ಕೃತಿಕ ಅಪಾಯಗಳ ಒತ್ತಡದಲ್ಲಿ ಸಿಲುಕಿರುವ ಮಧ್ಯಮ ವರ್ಗ ಒಂದು ರೀತಿಯಿಂದ ರೋಗಗ್ರಸ್ಥವಾಗಿದೆ. ದುಡಿಯುವ ವರ್ಗದಲ್ಲಿ ಈ ಸ್ತ್ರೀ ಸಂಬಂಧಿ ಭ್ರಮೆ ಮತ್ತು ಸಮಸ್ಯೆಗಳು ಕ್ರಮೇಣ ಆವರಿಸಿಕೊಳ್ಳುತ್ತಿವೆ.

ಬಹುರಾಷ್ಟ್ರೀಯ ಕಂಪನಿಗಳು ತಯಾರಿಸುವ ವಸ್ತುಗಳ ಬಗ್ಗೆ ಯಾವುದೇ ನಿರ್ಬಂಧವಿಲ್ಲದೆ ಹರಿದು ಬರುವ ಜಾಹಿರಾತಿನ ಆಕರ್ಷಣೆಯಲ್ಲಿ ಮನುಷ್ಯ ತನ್ನ ವಿವೇಕವನ್ನು ಕಳೆದುಕೊಳ್ಳುತ್ತಿರು ವನು. ಹಿಂದಿಗಿಂತಲೂ ಇಂದು ಭೋಗಪ್ರದ ವಸ್ತುಗಳ ಮೋಹ ಮತ್ತು ಕೊಳ್ಳುಬಾಕುತನ ಸಾಮಾನ್ಯರಲ್ಲಿ ಪ್ರಭುವಾಗಿ ಬೆಳೆಯುತ್ತಿದೆ. ವಸ್ತುಮುಖೇನ ದೊರೆಯುವ ಅಲ್ಪ ಸುಖಕ್ಕಾಗಿ ನಿಸರ್ಗ ಮತ್ತು ಮನುಷ್ಯನ ಒಡನಾಟದಿಂದ ದೊರೆಯುತ್ತಿದ್ದ ದೀರ್ಘ ಪರಿಣಾಮದ ಸಂತೃಪ್ತಿಯಿಂದ ವಂಚಿತನಾಗಿರುವನು. ಮನೆ ಕುಟುಂಬದ ಕಲ್ಪನೆಯೆ ನಾಗರಿಕತೆಯ ದಾಪುಗಾಲಿಗೆ ಸಿಕ್ಕು ನುಚ್ಚು ನೂರಾಗುತ್ತಿವೆ. ಉದ್ಯೋಗ ಅರಸಿ ನಗರಗಳಿಗೆ ವಲಸೆ ಬರುವ ಯುವಕ, ಯುವತಿಯರು ಆಧುನಿಕ ಬದುಕಿನ ಸುಳಿಯಲ್ಲಿ

ಸಿಕ್ಕು ಪಾತಾಳಕ್ಕೆ ಇಳಿಯುತ್ತಿರುವರು. ಸಮಾಜ-ಕುಟುಂಬಗಳು ಏಕಕಾಲದಲ್ಲಿ ವ್ಯಕ್ತಿ ಮೇಲಿನ ಹಿಡಿತವನ್ನು ಕಳೆದುಕೊಳ್ಳುತ್ತಿವೆ. ಇದಕ್ಕೆಲ್ಲ ಕಾರಣ ಮಾಧ್ಯಮಗಳಿಂದ ಹರಿದು ಬರುವ ಭ್ರಮೆಗಳು ಮನುಷ್ಯನಲ್ಲಿಯ ಸಾಮಾಜಿಕ ಜವಾಬ್ದಾರಿಯನ್ನು ನಾಶಮಾಡುತ್ತಿರುವ ರೀತಿ ಎನ್ನಬಹುದು.

ಬೆಂಗಳೂರಿನಂತಹ ನಗರಗಳಲ್ಲಿ ಮಧ್ಯಮ ವರ್ಗದ ಜನ ಸಂಪತ್ತಿನ ಗಳಿಕೆಗಾಗಿ ಮನೆಯ ಮಕ್ಕಳನ್ನು ಅನಾರೋಗ್ಯದ ಚಟುವಟಿಕೆಗಳಿಗೆ ಪ್ರೇರೇಪಿಸುತ್ತಿರುವರು. ಸ್ಥಳೀಯ ವಸ್ತುವನ್ನು ಒಳಗೊಂಡ ಹಾಗೇ ವಿದೇಶಿ ಉತ್ಪಾದಿತ ವಸ್ತುಗಳಿಗೆ ಮಹಿಳೆಯರನ್ನು ರೂಪದರ್ಶಿಯರನ್ನಾಗಿ ಬಳಸಿಕೊಳ್ಳುವುದನ್ನು ಹೆಮ್ಮೆಯ ಸಂಗತಿ ಎಂದು ಕಾಣುತ್ತಿರುವೆವು.

ಜಾಹೀರಾತುಗಳಿಗೂ ವಸ್ತುಗಳಿಗೂ ಕಾರ್ಯಕಾರಣ ಸಂಬಂಧವೆಂಬುದೇ ಕಾಣುತ್ತಿಲ್ಲ. ಮನೋವಿಕಾರಕ್ಕೆ ಆಸ್ಪದ ನೀಡುವ, ಸಾಮಾಜಿಕ ಸ್ವಾಸ್ಥ್ಯ ಕೆಡಿಸಬಹುದಾದ ಜಾಹೀರಾತುಗಳ ಮೇಲೆ ಕನಿಷ್ಠ ಪ್ರಮಾಣದ ನಿಯಂತ್ರಣ ಸಮಾಜ ಮತ್ತು ಸರಕಾರಕ್ಕಿಲ್ಲದಾಗಿದೆ. ದುಡಿಯುವ ವರ್ಗದ ಬದುಕಿನ ಸಂದೇಶದ ಮೇಲೆ ಜಾಹೀರಾತುಗಳು ದಾಳಿಗಿಳಿದಿವೆ. ನಮ್ಮ ದೇಶಿ ಪಾರಂಪಾರಿಕ ನಂಬಿಕೆ ಮತ್ತು ಸಂಸ್ಕೃತಿಯನ್ನು ಕ್ರಮೇಣ ವಿನಾಶಗೊಳಿಸುವ ಎಲ್ಲ ಹುನ್ನಾರಗಳು ಈ ಜಾಹೀರಾತುಗಳ ಮೂಲಕ ನಮ್ಮ ಮನೆಮನೆಯ ಮಕ್ಕಳ ಮನಸ್ಸಿನ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತಿರುವುದರ ಕಡೆ ನಮ್ಮ ಗಮನ ಕೇಂದ್ರೀಕರಿಸಬೇಕಾಗಿದೆ. ಉದಾಹರಣೆಗೆ, ನಮ್ಮ ಕೌಟುಂಬಿಕ ಬದುಕಿನ ಸೌಹಾರ್ದ ಸಂಬಂಧದ ಪ್ರತೀಕವಾಗಿದ್ದ ಮನೆಗೆ ಬಂದವರ ಬಾಯಾರಿಕೆ ನೀರುಕೊಡುವ ಸ್ಥಾನದಲ್ಲಿ ಚಹಾ, ಕಾಫಿಗಳು ಹಲವು ವರ್ಷಗಳ ಆಧಿಪತ್ಯ ಸ್ಥಾಪಿಸಿದ್ದವು. ಇಂದು ಅದರ ಸ್ಥಾನದಲ್ಲಿ ಕೊಕೋ ಕೋಲಾ ಮಿಂಚುತ್ತಿದೆ. ಅದು ಹೇಗೆಂದರೆ ನಮ್ಮ ರೂಪದರ್ಶಿಯರನ್ನು ಜನಪ್ರಿಯ ನಟರುಗಳನ್ನು ಬಳಸಿಕೊಂಡು ಮಾಡುತ್ತಿರುವ ಜಾಹೀರಾತು ಇಡೀ ನಮ್ಮ ಕೃಷಿ ಸಂಸ್ಕೃತಿಯನ್ನೇ ನಾಶ ಮಾಡುವಂತಿದೆ. ಹೊಲಕ್ಕೆ ಹೋಗಿ ಬಾಯಾರಿದೆ ಎಂದು ಯಾರಾದರೂ ಕೇಳಿದರೆ ಬಾವಿಯ ನೀರನ್ನು ಸೇದಿ ಬಾಯಾರಿಕೆಯನ್ನು ನೀಗುವ ನಮ್ಮ ಮಾನವ ಸಹಜತೆಯೆ ಮರೆಯಾಗಿ ಅದರ ಸ್ಥಾನದಲ್ಲಿ ಅಮೀರ್‌ಖಾನ್ ರೈತನ ವೇಶದಲ್ಲಿ ಬಂದು ಬಾವಿಯಿಂದ ಸೇದಿ ನೀರು ಕೇಳಿದ ಬೆಡಗಿಯರಿಗೆ ನೀಡುವುದೇನೆಂದರೆ ಪೆಪ್ಸಿ ಕೊಕೋ ಕೋಲಾದ ಬಾಟಲಿಗಳನ್ನು. ಅಷ್ಟೇ ಅಲ್ಲ, ಆ ಬೆಡಗಿಯರು ನೀರು ಕುಡಿದು ಅಮೀರ್‌ಖಾನ್‌ನನ್ನು ಮುತ್ತಿಕ್ಕಿ ಮೂರ್ಛೆಗೊಳಿಸುವುದು. ಇದು ಏಕಕಾಲದಲ್ಲಿ ನಮ್ಮ ನೆಲದ ಸಂಸ್ಕೃತಿಯನ್ನು ನಮ್ಮ ಮನೆಯ ಹೆಣ್ಣುಮಕ್ಕಳನ್ನು ಮುಂದಿಟ್ಟೇ ಮಾಡುವುದು. ಹೀಗೆ ಮಾರುಕಟ್ಟೆಯ ಸಂಸ್ಕೃತಿ ತಮ್ಮ ಪಾರಂಪರಿಕ ನಂಬಿಕೆ, ನಡತೆ, ವಿಚಾರಗಳನ್ನು ಕ್ರಮೇಣ ನಾಶಗೊಳಿಸುವುದು. ಇಂತಹದ್ದನ್ನು ದಿನದಿನವು ನೋಡುವ ಮಕ್ಕಳು ಬಾವಿಯಲಿ ತೆಂಗಿನ ಕಾಯಿಗಳಲ್ಲಿ ಬಾಯಾರಿಕೆಗೆ ನೀರಿರುವುದು ಎಂಬುದನ್ನು ಮರೆತು ಬಾಯಾರಿಕೆ ಎಂದರೆ ಕೊಕೋ ಕೋಲಾ, ಪೆಪ್ಸಿ ಎಂದು ಭಾವಿಸುವ ಅಪಾಯಗಳು ನಮ್ಮೆದುರಿಗಿದೆ.

ನಮ್ಮ ಸಾಮಾಜಿಕ ಪಿಡುಗಾದ ವರದಕ್ಷಿಣೆ, ವರೋಪಚಾರಗಳ ಬಗ್ಗೆ ಕಾನೂನುಬದ್ಧವಾಗಿ ತಡೆಯುವ ಕ್ರಮವನ್ನು ಬಿಗಿಗೊಳಿಸುವಷ್ಟರಲ್ಲಿಯೇ ಅದು ನುಣುಚಿಕೊಂಡು ಹೊಸ ರೂಪದಲ್ಲಿ ಯುವಕ ಮನಸ್ಸಿನಲ್ಲಿ ಜಾಗ ಗಿಟ್ಟಿಸಿಕೊಂಡಿದೆ. ಸಾಂಪ್ರದಾಯಿಕವಾಗಿ ಮದುವೆಯಲ್ಲಿ ಸ್ಥಿತಿವಂತರನ್ನು ವರನನ್ನು ಎದುರುಗೊಳ್ಳಲು ಬೀಳ್ಕೊಡಲು ಕುದುರೆ, ಎತ್ತಿನಬಂಡಿ, ಟಾಂಗಾ, ತೆರೆದ ಜೀಪುಗಳನ್ನು ಬಳಸಿ ತಮ್ಮ ಸಂತೋಷ, ಸಂಭ್ರಮ, ಯೋಗ್ಯತೆ, ಅಂತಸ್ತುಗಳ ಪ್ರದರ್ಶಿಸುತ್ತಿದ್ದರು. ಇಂದು ಕುದುರೆಗಾಡಿ, ಎತ್ತಿನ ಬಂಡಿಯ ಸ್ಥಾನದಲ್ಲಿ ಹೀರೋ ಹೋಂಡಾ ಬಂದು ಒಕ್ಕರಿಸಿದೆ. ವರನ ಮೆರವಣಿಗೆಯ ಮೂಲಕ ಮೂಡಿಬರುವ ಹೀರೋ ಹೋಂಡಾ ಹಲವಾರು ಆಪತ್ತುಗಳನ್ನು ಉದ್ಯಮ ವರ್ಗದ ಕನ್ಯಾಪಿತೃಗಳಿಗೆ ತಂದಿಡುವುದು.

ಗಂಡಸಿನ ಕ್ರೌರ್ಯ ಮತ್ತು ಯಜಮಾನ ಸಂಸ್ಕೃತಿಯ ಬರ್ಬರತೆಯನ್ನು ಮುಚ್ಚುವ ಸಲುವಾಗಿ ಮಹಿಳೆಯರನ್ನು ಸಂಘಟಿತವಾಗದ ಹಾಗೇ ಸಾಂಸ್ಕೃತಿಕ ವಿರೋಧಾಭಾಸಗಳನ್ನು ಹುಟ್ಟು ಹಾಕಲಾಗಿದೆ. ಕುಟುಂಬ ಕಲಹಗಳನ್ನು ಸುಂದರವಾದ ವ್ಯಾಖ್ಯಾನಗಳಿಗೆ ಒಳಪಡಿಸಿ ಅವುಗಳನ್ನು ವೇದಗಳಂತೆ ಜನಮಾನಸದಲ್ಲಿ ಉಳಿಸಿದ್ದೇವೆ. ದ್ವೇಷ, ಅಸೂಯೆ, ಸಹಕರಿಸದಿರುವುದು, ಅಸಹನೆ, ಮುಂತಾದ ಮಾನವ ದೌರ್ಬಲ್ಯಗಳನ್ನು ಲಿಂಗ ನೆಲೆಯಲ್ಲಿ ಆರೋಪಿಸುತ್ತಾ ಬರಲಾಗಿದೆ. 'ನೂರು ತಲೆ ಕೂಡ ಬಹುದು ಮೂರು ಜಡೆ ಕೂಡೆವು' ಎನ್ನುವುದಾಗಲಿ, 'ಹೆಣ್ಣಿಗೆ ಹೆಣ್ಣೆ ಶತ್ರು' ಎನ್ನುವುದೆಲ್ಲ ಗಂಡಸಿನ ಸ್ವಾರ್ಥ ಮೂಲದಿಂದ ಹುಟ್ಟಿದವುಗಳು.

ಇಂತಹ ಊಳಿಗಮಾನ್ಯ ಸಿದ್ಧಾಂತಗಳು ಹೊಸ ಬಣ್ಣದಿಂದ ಹೆಣ್ಣು ಹೆಣ್ಣುಗಳ ಮಧ್ಯೆ ಮತ್ತೆ ಚಲಾವಣೆಗೆ ವಸ್ತುಮುಖೇನ ಗಟ್ಟಿಗೊಳ್ಳುತ್ತಿವೆ. ಪಾತ್ರೆ ತಿಕ್ಕುವ ಒಂದು ಸೋಪು ಈ ಸ್ಥಾಪಿತ ಸಾಂಸ್ಕೃತಿಕ ಮೌಲ್ಯವನ್ನು ಹೇಗೆ ಬಿತ್ತರಿಸುತ್ತದೆ ಎಂದರೆ ಹೊಸದಾಗಿ ಬಂದ ಸೊಸೆ ಪಾತ್ರೆ ತಿಕ್ಕಿದ್ದನ್ನು ಮೂಗು ಮುರಿದು ನೋಡುವ ಅತ್ತೆಯ ಹಾವಭಾವದ ಮೂಲಕ ಅತ್ತೆತನದ ಕ್ರೌರ್ಯವನ್ನು ಮತ್ತೆ ಮತ್ತೆ ಮಹಿಳೆಯರಲ್ಲಿ ಗಟ್ಟಿಗೊಳಿಸುತ್ತೇವೆ. ಕ್ಷಣಾರ್ಧದಲ್ಲಿ ತಣತಣ ಎಂದು ಮಿಂಚುವ ಪಾತ್ರೆಯಲ್ಲಿ ಅತ್ತೆ ತನ್ನ ಮುಖ ನೋಡಿಕೊಂಡು ಬೆರಗುಗೊಳ್ಳುವ ಮುಖ ತೋರಿಸಿ ಸಾಬೂನು ಸೊಸೆಯನ್ನು ಏಕಕಾಲಕ್ಕೆ ಪರದೆಯ ಮೇಲೆ ತೋರಿಸಲಾಗುತ್ತದೆ. ಅಂದರೆ ಅತ್ತೆಯಂದಿರನ್ನು ಖುಷಿಪಡಿಸಬೇಕಾದರೆ ಸೊಸೆಯಂದಿರು ಫಳಫಳ ಹೊಳೆಯುವ ಹಾಗೆ ಪಾತ್ರೆ ತೊಳೆಯಬೇಕು. ಅದು ಇಂತಹದೆ ಲೇಬಲ್ಲಿನ ಸೋಪಿನಿಂದ ಎಂಬ ಸಂದೇಶವನ್ನು ಸೊಸೆಯಾದವರಲ್ಲಿ ತಂದು ಬಿಡುವುದು.

ಲೋಹಿಯಾರಂತಹವವು ಸೌಂದರ್ಯವನ್ನು ಬೆವರಿನ ಸಾಲಿನಲ್ಲಿ ದುಡಿಮೆಯ ಮುಖದಲ್ಲಿ ಕಂಡಿದ್ದರೆ ಇಂದು ಅದರ ಅರ್ಥವೇ ಬೇರೆಯಾಗಿದೆ. ತೆಳ್ಳಗೆ ಬೆಳ್ಳಗೆ ಎತ್ತರವಾಗಿ ಇರುವುದು ಮಾತ್ರ ಸೌಂದರ್ಯವೆಂದು ಭ್ರಮೆಗಳನ್ನು ಹುಟ್ಟಿಸಿದೆ. ತೆಳ್ಳಗಿರಲು ಮಹಿಳೆಯರು, ಯುವತಿಯರು ಪಡುತ್ತಿರುವ ಪರಿಪಾಟಲು ನೋಡುವಂತಿಲ್ಲ. ಅಂಕಿ ಸಂಖ್ಯೆಗೆ ಮೈ ಒಗ್ಗಿಸಿಕೊಳ್ಳಲು ಹುಡುಗಿಯರು ಹಲವು ಹತ್ತು ಆಪತ್ತುಗಳಿಗೆ ಒಳಗಾಗುತ್ತಿರುವರು. ದುಡಿಮೆ, ಶ್ರಮವೆನ್ನುವುದು ಆರೋಗ್ಯವಂತಿಕೆಯ ಲಕ್ಷಣವೆನ್ನುವುದು ಮರೆಯಾಗುತ್ತಿದೆ. ತಿನ್ನಲು ಕೂಳಿಲ್ಲದೆ ಸಾಯುವವರು ಒಂದು ಕಡೆಯಾದರೆ ತಿಂದರೆ ಸೌಂದರ್ಯ ಹಾಳಾಗುತ್ತದೆ ಎಂಬ ಭೀತಿಯಿಂದ ತಿನ್ನದೆ ಸಾಯುವವರ ಸಂಖ್ಯೆ ಒಂದು ಕಡೆ ಏರುತ್ತಿದೆ. ಇದಕ್ಕೆಲ್ಲ ಕಾರಣ ಪಾಶ್ಚಿಮಾತ್ಯ ದೇಶಗಳು ಹುಟ್ಟು ಹಾಕಿರುವ ಸೌಂದರ್ಯ ಸ್ಪರ್ಧೆಯ ಫಲಿತಗಳಿವು. ಮೈಯಲ್ಲಿ ರಕ್ತಮಾಂಸವಿಲ್ಲದೆ ಬಿಳುಚಿಕೊಂಡ ದೇಹವನ್ನು ಸುಂದರ ದೇಹವೆಂದು ಕರೆಯುತ್ತಲೇ ಮಹಿಳೆಯರ ಕ್ರಿಯಾಶೀಲತೆಯನ್ನು ಹರಣ ಮಾಡಲಾಗುತ್ತದೆ. ಈ ಸೌಂದರ್ಯ ವೃದ್ಧಿಯಾಗಲು ಇಂತಹ ವಸ್ತುವನ್ನು ಉಪಯೋಗಿಸಿರಿ ಎಂಬ ಜಾಹೀರಾತುಗಳು ನಮ್ಮ ಮಹಿಳೆಯ ತಲೆಯಲ್ಲಿ ಹೇನುಗಳ ಹಾಗೇ ಹರಿದಾಡುತ್ತವೆ. ಇಂತಹ ವಸ್ತುವಿನ ಸಾಂಸ್ಕೃತಿಕ ಸಂದೇಶ ಯಥಾಸ್ಥಿತಿವಾದವನ್ನು ಮುಂದುವರಿಸಿಕೊಂಡು ಹೋಗಲು ಅನುವು ಮಾಡಿಕೊಡುತ್ತದೆ.

ಒಂದು ಸೌಂದರ್ಯವರ್ಧಕದ ಜಾಹೀರಾತು 'ಉದ್ಯೋಗಂ ಪುರಷ ಲಕ್ಷಣಂ' ಎಂಬುದನ್ನು ಬದಲಿಸುವ ಹಾಗೇ ಕಾಣಿಸಿಕೊಂಡಿತು ಎಂದು ಮುಗುಳ್ನಗುವಷ್ಟರಲ್ಲಿಯೇ ಬಿಳಿಯ ಬಣ್ಣ ದುತ್ತನೆ ಕಣ್ಣೆದುರಿಗೆ ಬಂದು ನಗುವನ್ನು ತಿಂದು ಹಾಕುತ್ತದೆ. ಒಬ್ಬ ಮಗಳು ಉದ್ಯೋಗ ಮಾಡುವುದು ಸಹ ಮಗ ಮಾಡುವ ಉದ್ಯೋಗಕ್ಕೆ ಸಮ ಎಂಬ ಭಾವನೆ ನಮ್ಮಲ್ಲಿ ಮೂಡುತ್ತಿಲ್ಲ. ತಂದೆಯೊಬ್ಬ ಕಪ್ಪು ಕಾಫಿಗಾಗಿ ದಯನೀಯವಾಗಿ ಕೇಳುವುದು. ಅದಕ್ಕೆ ಮನೆಯೊಡತಿ ಹೀಯಾಳಿಸುವುದು. ಮಗಳು ಕಪ್ಪು ಬಣ್ಣದ ಮುಖ ಹೊತ್ತು ಉದ್ಯೋಗಕ್ಕಾಗಿ ಅಲೆದಾಡುವುದು, ಬಣ್ಣ ಕಾರಣವಾಗಿ ಉದ್ಯೋಗ ದೊರೆಯದೆ ಹೋಗುವುದರಿಂದ ಬದುಕಿನ ಬಗ್ಗೆ ಬೇಸರಪಟ್ಟುಕೊಳ್ಳುವಷ್ಟರಲ್ಲಿಯೇ ನಮ್ಮ ವಿದೇಶಿ ಕಂಪನಿಗಳು ಉತ್ಪಾದಿಸಿದ 'ಫೇರನ್ ಕ್ರೀಮ್' ದೇವರು ಪ್ರತ್ಯಕ್ಷವಾದಂತೆ ಪ್ರತ್ಯಕ್ಷವಾಗಿ ಆ ಯುವತಿಯ ಸಮಸ್ಯೆಗೆ ಪರಿಹಾರ ಸೂಚಿಸುವುದು ನಂತರ ಯುವತಿ ಆ ಕ್ರೀಮ್‌ಅನ್ನು ಮುಖಕ್ಕೆ ಹಚ್ಚಿಕೊಂಡು ಸಂದರ್ಶನಕ್ಕೆ ಹೋದರೆ ಉದ್ಯೋಗ ಓಡೋಡಿ ಬಂದು ಆಕೆಯನ್ನು ತಬ್ಬಿಕೊಳ್ಳುವುದು. ಕೈತುಂಬ ಸಂಬಳ. ಜಗತ್ತೆಲ್ಲ ಆಕೆಯನ್ನು ಬೆರಗಾಗಿ ನೋಡುವುದು. ಕಪ್ಪು ಕಾಫಿಗಾಗಿ ಬಾಯಿ ತೆರೆದ ತಂದೆಗೆ ಪಂಚತಾರಾ ಹೋಟೆಲಿಗೆ ಕರೆದುಕೊಂಡು ಹೋಗುವ ದೃಶ್ಯ ಎಂತಹ ಭ್ರಮೆಯನ್ನು ಯುವತಿಯರಲ್ಲಿ ತುಂಬುತ್ತವೆ.

ವಿದ್ಯೆ ಬುದ್ಧಿ ಎನ್ನುವುದು ಇಂದು ಉದ್ಯೋಗದ ಅರ್ಹತೆಗಳಲ್ಲ. ಬಣ್ಣ ಮೈಕಟ್ಟು ಮಾತ್ರ ಉದ್ಯೋಗದ ಬೇಟೆಗೆ ಅತ್ಯಂತ ಸಮರ್ಥ ಅಸ್ತ್ರಗಳು ಎಬ ಸಂದೇಶದ ಹಿಂದೆ ಹೆಣ್ಣಿನ ಲೈಂಗಿಕ ಸಂಬಂಧಿ ವಿಷಯವಿದೆ. ಪ್ರತಿಯೊಂದು ಸೋಪಿನ ಹಿಂದೆ ನಗ್ನ ಸುಂದರಿಯ ದೇಹ ಧಾರಾಳವಾಗಿ ಪ್ರದರ್ಶಿತವಾಗುತ್ತದೆ. ಗಂಡಸರು ಬಳಸುವ ವಸ್ತುಗಳಿಗೂ ಎಗ್ಗಿಲ್ಲದೆ ತುಂಡು ಉಡುಗೆಯ ಬಿಳಿ ಜಿರಲೆಗಳನ್ನು ಜೋತಾಡಿಸುವುದನ್ನು ನೋಡಬಹುದು. ಸಾರಾಸಗಟಾಗಿ ಇಂದು ನಗರದ ಕೇಂದ್ರಿತ ಮಧ್ಯಮ ವರ್ಗ ಹರೆಯದ ಹುಡುಗಿಯರ ಮೇಲೆ ನಿಯಂತ್ರಣವನ್ನು ಕಳೆದುಕೊಂಡಿವೆ.

ಜೊತೆಗೆ ಸಹಕಾರಗಳು ಪ್ರವಾಸೋದ್ಯಮವನ್ನು ವಿದೇಶಿ ವಿನಿಮಯದ ಗುಂಗಿನಲ್ಲಿ ಏನಕೇನ ಅಭಿವೃದ್ಧಿಗೊಳಿಸಲು ಮುಂದಾಗಿದೆ. ಪ್ರವಾಸವೆಂಬುದು ವಿದೇಶಿಗರಿಗೆ ಸಂಪದ್ಭರಿತ ದೇಶದ ಸಂಸ್ಕೃತಿ, ಪ್ರಕೃತಿ, ನಿಸರ್ಗ ನೋಡುವುದಲ್ಲ, ಎಲ್ಲ ರೀತಿಯಿಂದಲೂ ಅವರಿಗೆ ತೃಪ್ತಿ ನೀಡಬೇಕು ಎಂಬ ಧೋರಣೆಯಿಂದ ಸರಕಾರಿ ಸೂಳೆಗಾರಿಕೆಯನ್ನು ಕಾನೂನು ರೀತಿಯಲ್ಲಿ ನಡೆಸುವ ವ್ಯವಸ್ಥಿತ ಸಂಚು. ನಿರುದ್ಯೋಗದಿಂದ ಬಳಲುತ್ತಿರುವ ಯುವತಿಯರು ಸುಖದ ಭ್ರಮೆಗಳನ್ನು ಹೊತ್ತು ಇಂತಹ ಶೋಷಣೆಯ ಜಾಲಕ್ಕೆ ಬೀಳುವರು.

ಇಂದು ಈ ರೋಗ ಬರೀ ನಗರದಲ್ಲಿಲ್ಲ. ಹಳ್ಳಿಗಳನ್ನು ಹುಡುಕಿಕೊಂಡು ಬಂದಿದೆ. ಉಡಲು ಉಣ್ಣಲು ಒದ್ದಾಡುವ ನಮ್ಮ ಗ್ರಾಮಾಂತರ ಹೆಣ್ಣುಮಕ್ಕಳಲ್ಲಿಯೂ ಈ ಸೌಂದರ್ಯದ ರೋಗ ಉಲ್ಬಣಗೊಳ್ಳುತ್ತಿದೆ. ನಾಗರಿಕತೆಯ ನಯವಂಚಕತನವನ್ನು ಅರ್ಥಮಾಡಿಕೊಳ್ಳಲು ವಿಫಲರಾದ ನಮ್ಮ ಗ್ರಾಮಾಂತರ ಪ್ರದೇಶಧ ಹುಡುಗಿಯರು ಚೇತರಿಸಿಕೊಳ್ಳಲು ಸಾಧ್ಯವಾಗದ ಹೊಡೆತವನ್ನು ತಿನ್ನುತ್ತಿರುವರು. ಹೆಜ್ಜೆಹೆಜ್ಜೆಗೊಂದು ನಾಯಿಕೊಡೆಯಂತೆ ತಲೆ ಎತ್ತಿರುವ ಬ್ಯೂಟಿ ಪಾರ್ಲರ್‌ಗಳು ನಮ್ಮ ಹೆಣ್ಣು ಮಕ್ಕಳ ಮನೆ ಮದ್ದಿನ ಪರಂಪರೆಯನ್ನೇ ನಾಶಗೊಳಿಸುತ್ತಿವೆ. ಸರಕಾರಿ ಸ್ವಾಮ್ಯದಲ್ಲಿರುವ ಬಿ.ಎಸ್.ಎನ್.ಎಲ್.ದಂತಹ ಮೊಬೈಲ್ ಸಂಸ್ಥೆ ಸಂದೇಶ ಕಳಿಸಲು ಬಳಸುವ ಹಾದಿ ಶಾಲೆ, ಕಾಲೇಜುಗಳು ಕೇವಲ ಹಾಳೆ ಉಂಡೆಗಳನ್ನು ಹುಡುಗಿಯರ ಮೇಲೆ ಎಸೆಯುವಂತೆ ಪ್ರಚೋದಿಸುತ್ತಿದೆ. ಇಂತಹ ಅಪಾಯಕಾರಿಯಾದ ಸನ್ನಿವೇಶಗಳು ವಾಣಿಜ್ಯ ಸಂಬಂಧಿಕಾರಣಗಳಿಂದ ಸೃಷ್ಟಿಯಾಗುತ್ತಿವೆ. ಇವುಗಳನ್ನು ಗಂಭೀರವಾಗಿ ಸರಕಾರ, ಸಮಾಜ ನಿಯಂತ್ರಿಸುವ ಅಗತ್ಯತೆಯಿದೆ. ಅದರ ಕುರಿತು ಸಾರ್ವಜನಿಕ ಅಭಿಪ್ರಾಯ ರೂಪಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

ಕೃಪೆ : ಸಂವಾದ

ಮಾತೃದೇವತೆಗಳು - ಪ್ರಕೃತಿ

- ಡಾ॥ ಶೈಲಜ ಹಿರೇಮಠ

ಮಾತೃಪ್ರಧಾನ ಸಿದ್ಧಾಂತವನ್ನು ರೂಪಿಸುವಾಗ ಮಾತೃದೇವತೆಗಳನ್ನು ಶ್ರೇಷ್ಠತೆಯ ನೆಲೆಯಲ್ಲಿಯೇ ವ್ಯಾಖ್ಯಾನಿಸಲಾಗಿದೆ. ಎಲ್ಲಮ್ಮ ಹುಲಿಗೆಮ್ಮ ಗಾಳೆಮ್ಮ ಮೊದಲಾದವರನ್ನು ಮಾತೃದೇವತೆಗಳು ಎಂದು ಗುರುತಿಸಲಾಗುತ್ತಿದ್ದು ಅವರನ್ನು ಮಾತೃಪ್ರಧಾನ ಸಮಾಜದವರು ಎಂದೇ ಪರಿಗಣಿಸಲಾಗುತ್ತಿದೆ. ಸಾಮಾನ್ಯವಾಗಿ ಎಲ್ಲ ಗ್ರಾಮದೇವತೆಗಳ ಹೆಸರುಗಳ ಮುಂದೆ ಅವ್ವ ಇಲ್ಲವೆ ಅಮ್ಮ ಎಂದು ಇರುತ್ತದೆ. ಉದಾಹರಣೆಗೆ ಎಲ್ಲಮ್ಮ, ಹುಲಿಗೆವ್ವ, ದುರುಗವ್ವ, ದ್ಯಾಮವ್ವ, ಕಾಳಮ್ಮ ಈ ಮೊದಲಾದ ಹೆಣ್ಣು ದೈವಗಳನ್ನು ಕರೆಯುವ ವಾಡಿಕೆಯನ್ನು ಗಮನಿಸಬೇಕು. ಅವ್ವ, ಅಮ್ಮ, ಈ ಪದಗಳೂ ಕೂಡ ಮಾತೃತ್ವವನ್ನೇ ಪ್ರಧಾನವಾಗಿ ಧ್ವನಿಸುತ್ತದೆ. ಅಲ್ಲದೆ ಹೆಣ್ಣು ದೇವತೆಗಳೆಲ್ಲ ಫಲವಂತಿಕೆಯಿಂದಲೇ ಗುರುತಿಸಿಕೊಂಡಿರುವರು. ಫಲವಂತಿಕೆಯಿಂದಲೇ ಅಧಿ ಕೃತತೆಯನ್ನು, ಚಹರೆಯನ್ನು ಪಡೆದುಕೊಂಡ ಹೆಣ್ಣು ದೈವಗಳನ್ನು ಸ್ತ್ರೀಶಕ್ತಿಯ ನೆಲೆಯಲ್ಲಿ ನಿರ್ವಚಿಸಲಾಗದು.

ನಿಸರ್ಗದಲ್ಲಿ ಸೃಷ್ಟಿ ಕ್ರಿಯೆಯನ್ನು, ಹೆಣ್ಣಿನಲ್ಲಿರುವ ಪ್ರಜನನ ಶಕ್ತಿಯನ್ನು ಏಕಕಾಲದಲ್ಲಿ ಜೊತೆಯಲ್ಲಿಟ್ಟು ಹೆಣ್ಣು ದೇವತೆಗಳನ್ನು ನಿರ್ವಚಿಸಲಾಗಿದೆ. ಕೊಸಾಂಬಿ ಮತ್ತು ಸಿದ್ಧಲಿಂಗಯ್ಯನವರು ದೇವತೆಗಳ ಕುರಿತು ಮಾಡಿರುವ ನಿರ್ವಚನಗಳನ್ನು ಗಮನಿಸಬಹುದು :

ಮಕ್ಕಳನ್ನು ಹೆರುವ ತಾಯಿಯಂತೆಯೇ ಪ್ರಕೃತಿಯೂ ಫಲವಂತಳಾಗಿದ್ದಾಳೆಂದೇ ಪ್ರಕೃತಿಯನ್ನು ದೇವತೆ ಎಂದು ಗುರುತಿಸಲಾಗುತ್ತದೆ. ಶಿಲಾಯುಗದ ಎಲ್ಲ ದೇವತೆಗಳೂ ಸ್ತ್ರೀಯರೆ. ಪಶುಪಾಲನೆ ಆರಂಭಗೊಂಡು, ಪುರುಷನ ಕೈಗೆ ಪಶುಸಂಪತ್ತು ಸೇರಿಹೋಗಿ ಪಿತೃಸ್ವಾಮ್ಯ ಸಮಾಜ ಹುಟ್ಟಿಕೊಂಡ ನಂತರದಲ್ಲಷ್ಟೇ ಪುರುಷ ದೇವತೆಗಳು ಬಂದದ್ದು (ಕೊಸಾಂಬಿ ಡಿ.ಡಿ. ಉದ್ಧೃತ; ಬಾಲಗೋಪಾಲ್, 1998, ಪು. 32-33).

ಹೆಣ್ಣಿನ ಗರ್ಭಧಾರಣೆ ಮತ್ತು ಭೂಮಿಯ ಸಸ್ಯಧಾರಣೆ ಇವೆರಡಕ್ಕೂ ಸಾಮ್ಯತೆಯನ್ನು ಕಂಡುಕೊಂಡ ಆದಿಮಾನವ ಹೆಣ್ಣು ಮತ್ತು ಭೂಮಿ ಇವೆರಡಕ್ಕೂ ಪ್ರಾಚ್ಯ ವಸ್ತುಗಳೆಂದು ಭಾವಿಸಿದ. ಆದಿಮಾನವನ ಮನಸ್ಸಿನಲ್ಲಿ ಹೆಣ್ಣು ಮತ್ತು ಪ್ರಾಣಿ ಈ ಎರಡು ಸಂಗತಿಗಳು ವಿಶೇಷವಾದ ಆಸಕ್ತಿಯನ್ನು ಕೆರಳಿಸಿದವು. ಲೈಂಗಿಕ ಸಂತೋಷದ ಮೂಲಾಧಾರವಾದ್ದರಿಂದ ಹೆಣ್ಣಿನ ಬಗ್ಗೆಯೂ, ಆಹಾರ ಮೂಲವಾದ್ದರಿಂದ ಪ್ರಾಣಿಗಳ ಬಗ್ಗೆಯೂ ಆದಿಮಾನವನಲ್ಲಿ ಕುತೂಹಲ ಬೆಳೆದಿರಬೇಕು. ಮೊದಲು ಮಾನವರು ಆಹಾರ ಸಂಗ್ರಹಣೆಯಲ್ಲೂ, ಬೇಟೆಯಲ್ಲಿ ತೊಡಗಿದ್ದರು. ಆದ್ದರಿಂದ ಅವರ ಕಲೆಯಲ್ಲಿ ಹೆಣ್ಣು ಮತ್ತು ಪ್ರಾಣಿಗಳು ಸ್ಥಾನವನ್ನು ಪಡೆದವು. ಹೆಣ್ಣನ್ನು ಚಿತ್ರಿಸುವಾಗ ಆಕೆಯ ಸ್ತನಗಳನ್ನು, ಜಘನಗಳನ್ನು ಪ್ರಧಾನವಾಗಿ ಚಿತ್ರಿಸಲಾಗಿದೆ. ಆದ್ದರಿಂದ ಈ ಹಂತದಲ್ಲಿ ಧಾರ್ಮಿಕವಾದ ಭಾವನೆಗಳು ಸ್ತ್ರೀಯ ಸುತ್ತಾ ಹೆಣೆದುಕೊಂಡಿರುವುದನ್ನು ಕಾಣುತ್ತೇವೆ (ಸಿದ್ಧಲಿಂಗಯ್ಯ, 1997, ಪು. 17 ರಿಂದ 218).

ಸೃಷ್ಟಿಯ ವ್ಯಾಪಾರವನ್ನು ಅರ್ಥೈಸಿಕೊಳ್ಳಲು ಉದ್ಯುಕ್ತನಾದ ಪುರುಷನಿಗೆ ಮಹಿಳೆ ಪ್ರಯೋಗ ಪಶುವಾದಳು ಎಂಬುದು ಈ ಮೇಲಿನ ವಿದ್ವಾಂಸರ ಹೇಳಿಕೆಗಳನ್ನು ಅನುಲಕ್ಷಿಸಿದಾಗ ತಿಳಿದು ಬರುವ ಸಂಗತಿ. ಈ ವಿಚಾರ ಸರಣಿಯೇ ಸ್ತ್ರೀ ವಿರೋಧಿ ಯಾದುದು. ಮಹಿಳೆ ಹೇಗೆ ಸೃಷ್ಟಿ ಕ್ರಿಯೆಯನ್ನು ಆ ಕಾಲದಲ್ಲಿ ನೋಡಿದಳು. ಗಂಡು ನೋಡಿದ ರೀತಿ ಇದು ಎಂದು ಹೇಳುತ್ತಾರೆ. ಹೆಣ್ಣಿನ ಅಭಿಪ್ರಾಯ ಇರಲಿಲ್ಲವೇ. ಆಕೆಯ Agency ಏನು ಎನ್ನುವುದರ ವಿಶ್ಲೇಷಣೆಯನ್ನು ಮಾತೃಪ್ರಧಾನ ಕುರಿತ ಅಧ್ಯಯನಗಳು ಮಾಡುವುದಿಲ್ಲ. ಹೆಣ್ಣು ಮತ್ತು ಪ್ರಕೃತಿಯ ಕುರಿತು, ಕುತೂಹಲ ಬೆಳೆಸಿಕೊಂಡ ಪುರುಷನು ಚರಿತ್ರೆಯ ಆರಂಭದಿಂದಲೂ ಸ್ತ್ರೀ ಮತ್ತು ಪ್ರಕೃತಿಯನ್ನು ವಿಲೀನಗೊಳಿಸಿಯೇ ಅಧ್ಯಯನ ಮಾಡಿದನು. ಇದರಿಂದಾಗಿ ಪುರುಷನಿಗೆ ಏಕಕಾಲದಲ್ಲಿ ಸ್ತ್ರೀ ಮತ್ತು ಪ್ರಕೃತಿಯ ಮೇಲೆ ಅಧಿಕಾರ ಸ್ಥಾಪಿಸಲು ಸಾಧ್ಯವಾಯಿತು. ಸ್ತ್ರೀಯರನ್ನು ಪ್ರಕೃತಿಯನ್ನಾಗಿ, ಪುರುಷರನ್ನು 'ಸಂಸ್ಕೃತಿ'ಯನ್ನಾಗಿ ಭಾರತೀಯ ಪರಂಪರೆಗಳು ನಿರ್ವಚಿಸುತ್ತವೆ. ಬನದಮ್ಮ, ಬಳಲಿಕವ್ವ, ಹುಲಿಗೆಮ್ಮ, ಬನಶಂಕರಿ, ಬಾದುಬ್ಬೆ ಮೊದಲಾದ ಸ್ತ್ರೀ ದೇವತೆಗಳು ಕೃಷಿ ಸಮೃದ್ಧಿ ನೆಲೆಯಲ್ಲಿ ನಿರ್ವಚಿಸಲ್ಪಟ್ಟರೆ, ಎಲ್ಲಮ್ಮ, ಲಜ್ಜಾಗೌರಿ ಮೊದಲಾದವರು ಸಂತಾನಶಕ್ತಿಯ ಅಡಿಯಲ್ಲಿ ವ್ಯಾಖ್ಯಾನಿಸಲ್ಪಟ್ಟಿದ್ದಾರೆ. ಆದರೆ ಇಂಥವರು ಕೃಷಿಸಮೃದ್ಧಿ ದೈವಗಳು, ಇವರು ಸಂತಾನ ಶಕ್ತಿಯ ದೇವರುಗಳು ಎಂದು ಸ್ತ್ರೀ ದೇವತೆಗಳನ್ನು ಗೆರೆ ಕೊರೆದು ವಿಂಗಡಿಸಲಾಗುವುದಿಲ್ಲ.

ಜಾಗತಿಕ ಮಟ್ಟದಲ್ಲಿ ಗುರುತಿಸಲ್ಪಟ್ಟ ಮೇರಿವುಲ್‌ಸ್ಟನ್ ಕ್ರಾಫ್ಟ್, ಸಿಮೋನ ದ ಬೋವಾನಿಂದ ಹಿಡಿದುಕೊಂಡು ಇವತ್ತಿನವರೆಗಿನ ಎಲ್ಲ ಸ್ತ್ರೀವಾದಿಗಳು ಹೆಣ್ಣನ್ನು ಜೈವಿಕ (ಪ್ರಕೃತಿ) ನೆಲೆಯಲ್ಲಿ, ಗಂಡನ್ನು ಸಂಸ್ಕೃತಿ (ಬೌದ್ಧಿಕ) ನಿಲುಮೆಯಲ್ಲಿ ಗುರುತಿಸುವುದನ್ನು ವಿರೋಧಿಸುತ್ತಾರೆ. ಭಾರತೀಯ ಹಾಗೂ ಕರ್ನಾಟಕದ ಸ್ತ್ರೀವಾದಿ ಚಿಂತನಕಾರರು ಇದಕ್ಕೆ ಹೊರತಾಗಿಲ್ಲ. ಸ್ತ್ರೀವಾದಿ ಚಿಂತಕರು ಕುಟುಂಬದಲ್ಲಿ, ಸಮಾಜದಲ್ಲಿ ಹೆಣ್ಣು, ಜೈವಿಕ ಕಾರಣ ದಿಂದಾಗಿಯೇ ಹೇಗೆ ಎರಡನೆಯ ದರ್ಜೆಯ ಪ್ರಜೆಯಾಗಿರು ವಳು ಎನ್ನುವುದನ್ನು ವಿಶ್ಲೇಷಿಸುತ್ತಾರೆ. ಜೈವಿಕ ಸಹಜವಾದ ಲೈಂಗಿಕ

ಭಿನ್ನತೆಯನ್ನೇ ಆಧಾರವಾಗಿಟ್ಟುಕೊಂಡು ಶ್ರೇಷ್ಠ-ಕನಿಷ್ಠ ಸಂಸ್ಕೃತಿ-ಪ್ರಕೃತಿ ಎಂದು ತಾರತಮ್ಯವನ್ನು ಸೃಷ್ಟಿಸಿದ ಪುರುಷಪ್ರಧಾನ ಮೌಲ್ಯಗಳ ಹಿಂದಿರುವ ರಾಜಕಾರಣವನ್ನು ಪ್ರಶ್ನಿಸುತ್ತಾರೆ :

''ಪ್ರಕೃತಿ'' ಸಂಸ್ಕೃತಿಯೆನ್ನುವ ದ್ವಂದ್ವ ವರ್ಗೀಕರಣ ಪಾಶ್ಚಿಮಾತ್ಯ ಸಂಸ್ಕೃತಿಯ ಸಂದರ್ಭದಲ್ಲಿ ಹೆಚ್ಚು ಪ್ರಸ್ತುತವೆನ್ನುವುದಾದರೂ ಒಂದಲ್ಲ ಒಂದು ರೀತಿಯ ಇದೇ ಬಗೆಯ ಕಲ್ಪನೆ ಹಾಗೂ ಆಲೋಚನೆಗಳನ್ನು ಇತರ ಸಂಸ್ಕೃತಿಗಳಲ್ಲೂ ಕಾಣಬಹುದು. ಮಕ್ಕಳನ್ನು ಹೊತ್ತು ಹೆತ್ತು ಸಾಕುವ ಸಂತಾನೋತ್ಪತ್ತಿಯ ಕಾರ್ಯವನ್ನು ಮಹಿಳೆಯ ಪ್ರಾಥಮಿಕ ಕೆಲಸವೆಂಬಂತೆ ಬಿಂಬಿಸುವ ಪುರಷ ಸಮಾಜ ಆಕೆಯನ್ನು ಪ್ರಕೃತಿಯೊಂದಿಗೆ ಸಮೀಕರಿಸಿದೆ. ಸ್ತ್ರೀ ಪ್ರಕೃತಿಯ ನಿಕಟವರ್ತಿ ಅಥವಾ ಆಕೆಯೇ ಪ್ರಕೃತಿ. ಅಂದರೆ ಮಾನವ ಸ್ವಭಾವಕ್ಕೆ ಹೊರತಾದ (ಪ್ರಕೃತಿ) ಗುಣವನ್ನು ಸ್ತ್ರೀಗೆ ಮೊದಲು ಆರೋಪಿಸಿ ಅನಂತರ ಆ ಗುಣವನ್ನೇ ಸ್ತ್ರೀ ಸ್ವಭಾವದ ಒಂದಂಗವೆನ್ನುವ ಹಾಗೆ ಕಾಣಲಾಗಿದೆ. ಸ್ತ್ರೀಯನ್ನು ಪ್ರಕೃತಿಯೊಂದಿಗೆ ಮತ್ತು ಪುರುಷನನ್ನು ಸಂಸ್ಕೃತಿಯೊಂದಿಗೆ ಸಮೀಕರಿಸುವ ಕಾಯಕದಲ್ಲಿ 19ನೆಯ ಶತಮಾನದ ಆತ್ಮವಿಶ್ವಾಸಿ ವೈಜ್ಞಾನಿಕ ಪ್ರಜ್ಞೆಯೂ ಹಿಂದೆ ಬೀಳಲಿಲ್ಲ. ಈ ಹಿನ್ನೆಲೆಯಿಂದ ವೈಜ್ಞಾನಿಕ ಸಂಸ್ಕೃತಿಯನ್ನು ಗಂಡು ತರ್ಕ ಮತ್ತು ಹೆಣ್ಣು ವಿಚಾರಹೀನತೆಗಳ ನಡುವಿನ ಆಧುನಿಕತೆ ಮತ್ತು ಪರಂಪರೆಗಳ ಹೋರಾಟವೆಂಬಂತೆಯೂ ಚಿತ್ರಿಸಲಾಗಿದೆ. ಆಧುನಿಕ ಮಾನವ ಚರಿತ್ರೆಯ ಪ್ರಗತಿಯ ಕತೆ ಪ್ರಕೃತಿಯ ಮೇಲೆ ಹೆಚ್ಚು ಅಧಿಕಾರ ಸ್ಥಾಪನೆಯ ಕತೆಯೂ ಹೌದು. ಪ್ರಕೃತಿಯನ್ನು ಸ್ತ್ರೀಯಾಗಿ ತಾಯಾಗಿ ಕಾಣಲಾಗಿದೆ. ಇಂತಹ ವ್ಯಕ್ತಿತ್ವಾರೋಪಣೆ ಸ್ತ್ರೀಯನ್ನು ಅಲೌಕಿಕಗೊಳಿಸಿ, ಮೊದಲನೆಯ ಸ್ಥಾನಕ್ಕೆ ಏರಿಸುತ್ತದೆ (ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ, 1994, ಪು. 20-21).

ತೇಜಸ್ವಿನಿ, ಸೀಮಂತಿನಿಯರಂತೆ ಸ್ತ್ರೀ ದೇವತೆಗಳ ಹಿಂದಿರುವ ಪುರುಷ ರಾಜಕಾರಣವನ್ನು ಅರ್ಥೈಸುವವರು ಕಡಿಮೆ. ಬಹುಪಾಲು ಮಹಿಳಾ ಚಿಂತಕರು ಹೆಣ್ಣನ್ನು ಪ್ರಕೃತಿ ನೆಲೆಯಲ್ಲಿಯೇ ವ್ಯಾಖ್ಯಾನಿಸುವರು.

ಮಾತೃದೈವ ಪರಿಕಲ್ಪನೆ ಮನುಷ್ಯನಲ್ಲಿ ಆದಿಯಿಂದಲೇ ಬೆಳೆದು ಬಂದಿದೆ. ಮನುಷ್ಯನ ಬದುಕಿನ ಆಗು-ಹೋಗುಗಳಿಗೆ ಸ್ತ್ರೀ ಪ್ರೇರಕ ಶಕ್ತಿಯೆಂದು ನಂಬಿದ್ದರಿಂದ ಹೆಣ್ಣನ್ನು ಶಕ್ತಿಯ ಮೂಲ-ಆದಿಶಕ್ತಿ-ಜಗನ್ಮಾತೆ ಎಂದು ಭಾವಿಸಿದರು. ಭಯ-ಭಕ್ತಿಯಿಂದ ಮಾತೃದೇವತಾರಾಧನೆ ನಡೆಸಿದರು. (ಶಾಲಿನಿ ರಘುನಾಥ, 2002, ಪು. 3).

ಸಂತತಿ ಬರಲು, ಅದು ಆಹಾರಾದಿಗಳನ್ನು ಪಡೆದು ಬೆಳೆಯಲು ಕಾರಣಳಾದ ಜನನಿಯನ್ನೇ ಬೃಹತ್ ರೂಪದಲ್ಲಿ ಕಂಡ, ಪೂಜಿಸಿದ, ಸುಫಲತೆಗೆ ಅವಳನ್ನು ಪ್ರಾರ್ಥಿಸಿದ. ಸೃಷ್ಟಿ-ಪುಷ್ಟಿ (ಜನನ ಹಾಗೂ ಪೋಷಣೆ)ಗೆ ಹೆಣ್ಣೇ ಕಾರಣ ! ಅದರಂತೆ ಕಾಳು, ಹಣ್ಣು ಬೆಳೆಗೆ ಕಾರಣವಾದ ಭೂಮಿಯೂ ಹೆಣ್ಣುದೇವತೆಯೇ ! (ಜ್ಯೋತ್ಸ್ನಾ ಕಾಮತ್, 1999, ಪು. 11)

ಎಂದೇ ಹೆಣ್ಣು ದೇವತೆಗಳನ್ನು ಮಹಿಳಾ ಚಿಂತಕರು ನಿರ್ವಚಿಸುತ್ತಾರೆ. ಲೌಕಿಕ ನೆಲೆಯಲ್ಲಿ ಪ್ರಕೃತಿಯನ್ನು ಹೆಣ್ಣಿನೊಂದಿಗೆ ಸಮೀಕರಿಸುವುದನ್ನು ವಿರೋಧಿಸುವ ಸ್ತ್ರೀ ಚಿಂತಕರು, ಅಲೌಕಿಕ ನೆಲೆಯಲ್ಲಿ ಈ ಬಗೆಯ ನಿರ್ವಚನಗಳನ್ನು ಒಪ್ಪಿಕೊಂಡು ಬಿಡುತ್ತಾರೆ. ಪ್ರಕೃತಿ ಮತ್ತು ದೈವಗಳು ಭೋಗ ಮತ್ತು ಉಪಭೋಗದಲ್ಲಿಯೇ ವ್ಯಾಖ್ಯಾನಿಸಲ್ಪಟ್ಟಿವೆ. ರಾಷ್ಟ್ರೀಯತೆಯ ಪರಿಕಲ್ಪನೆಯಲ್ಲಿ ಹುಟ್ಟಿಕೊಂಡ ಭಾರತ ಮಾತೆ, ಕರ್ನಾಟಕ ಮಾತೆ ಎನ್ನುವ ಪರಿಕಲ್ಪನೆಗಳು ಕೂಡ, ಮಹಿಳೆಯ ಸಮಗ್ರ ವ್ಯಕ್ತಿತ್ವವನ್ನು ನಿರಾಕರಿಸುತ್ತ ಮಾತೃತ್ವವನ್ನೇ ವೈಭವೀಕರಿಸುತ್ತದೆ. ರಾಷ್ಟ್ರೀಯವಾದಿ ಪರಿಕಲ್ಪನೆ ಕೂಡ ಪುರುಷಶಾಹಿ ಧೋರಣೆಯಲ್ಲಿ ರೂಪ ಪಡೆದಿದೆ.

ಲಜ್ಜಾಗೌರಿ : ಉಪಭೋಗ

''ಸ್ತನ, ಗರ್ಭ, ಯೋನಿ, ಇವುಗಳನ್ನು ಮಾತೃದೇವತೆಯ ಸಂಕೇತಗಳೆಂದು ಅವರು ಭಾವಿಸಿದ್ದರು. ಈ ಮೂರು ಅಂಗಗಳು ಮೂರು ಮುಖ್ಯ ಚಟುವಟಿಕೆಗಳನ್ನು ಮಾಡುತ್ತವೆ. ಅವು ಪಾಲನೆ, ಧಾರಣೆ ಮತ್ತು ಸೃಷ್ಟಿ'' (ಸಿದ್ದಲಿಂಗಯ್ಯ : 1997, ಪು. 17) ಎಂದು ವ್ಯಾಖ್ಯಾನಿಸಲ್ಪಟ್ಟ ಹೆಣ್ಣು ದೈವಗಳಲ್ಲಿ ಲಜ್ಜಾ ಗೌರಿಯ ಕುರಿತು ಸಾದಂರ್ಭಿಕ ಚರ್ಚೆಯನ್ನು ಬೆಳೆಸಲಾಗಿದೆ.

ರಾಮಚಂದ್ರ ಢೇರೆ ಅವರು ಲಜ್ಜಾ ಗೌರಿಯ ಕುರಿತು ಹೀಗೆ ಹೇಳುತ್ತಾರೆ :

ಲಂಜಿಕಾ ಅಥವಾ ಮಹಾಕೂಟೇಶ್ವರಿಯು ಸಕಲ ಸೃಷ್ಟಿಯನ್ನು ಪ್ರಸವಿಸುವ ಮಹಾಯೋಗಿಯೆನಿಸಿದ್ದಾಳೆ. ಎಲ್ಲ ನಿರ್ಮಿತಿಗಳಿಗೂ ಅವಳೇ ತವರು. ಅವಳ ಸ್ತನಪಾನವನ್ನು ಮಾಡುವುದರ ಮೂಲಕವೇ ಸಕಲ ಜೀವಜಂತುಗಳ ಜೀವನ ನಡೆಯುತ್ತಿರುವುದು. ಅವಳ ಮೂರ್ತಿ ನಿರ್ಮಾಣ (ಮತ್ತು ಪೋಷಣೆಯ)ದ ಇಂದ್ರಿಯವನ್ನು ತಿಳಿಯಬೇಕು ಎಂಬ ಕಾರಣಕ್ಕಾಗಿಯೇ ಆ ಭಾಗವನ್ನಷ್ಟೇ ರೂಪಿಸಿರುವುದು ಇಲ್ಲಿನ ಮುಖ್ಯ ದೃಷ್ಟಿಯಾಗಿದೆ. ಸೃಷ್ಟಿಯ ಸೂಚಕವಾದ ಯೋನಿ ಮತ್ತು ಪುಷ್ಟಿಯ ಸೂಚಕವಾದ ಸ್ತನಗಳಿಗೆ ಅವಳ ಮೂರ್ತ ವಿಜ್ಞಾನದಲ್ಲಿ ಮಹತ್ವದ ಸ್ಥಾನ ನೀಡಿರುವುದು ಸಹ ಈ ಸ್ವಾಭಾವಿಕತೆಯಿಂದಲೇ. ಆಕೆ ಕೇವಲ ಯೋನಿ ರೂಪದವಳು. ಅವಳನ್ನು ಶಿರೋವಿಹೀನೆ ಎಂದು ತಪ್ಪು ....(ರಾಮಚಂದ್ರ ಚಿಂತಾಮಣ ಢೇರೆ, 2003, ಪು. 21).

ರಾಮಚಂದ್ರ ಢೇರೆ ಅವರು ಲಜ್ಜಾಗೌರಿಯನ್ನು ಶಿರೋವಿಹೀನೆ ಎನ್ನಕೂಡದು ಎಂದೇ ಒತ್ತಾಯಿಸುತ್ತಾ, ಆ ನಿಟ್ಟಿನಲ್ಲಿ ಹೊರಡುವ ಚಿಂತನೆಗಳನ್ನು ಅಲ್ಲಗಳೆಯುತ್ತಾರೆ. ಸ್ತ್ರೀ ದೇವತೆಗಳನ್ನು ಫಲವಂತಿಕೆಯ ನೆಲೆಯಲ್ಲಿಯೇ ನಿರ್ವಚಿಸುವುದು ನ್ಯಾಯೋಚಿತವಾದುದು ಎಂದು ರಾಮಚಂದ್ರ ಢೇರೆ ಅವರು ನಂಬುತ್ತಾರೆ. ಈ ಬಗೆಯ ಚಿಂತನಾ ಮಾದರಿಯನ್ನೇ ನಮ್ಮ ಮಹಿಳಾ ಚಿಂತಕರು ಆದರ್ಶವಾಗಿಟ್ಟುಕೊಂಡಿರುವರು. ಲಜ್ಜಾಗೌರಿಯ ಕುರಿತಂತೆ ರಾಮಚಂದ್ರ ಢೇರೆ ಅವರ ಚಿಂತನೆಗಳನ್ನೇ ಮಾದರಿಯಾಗಿಟ್ಟುಕೊಂಡು ಜ್ಯೋತ್ಸ್ನಾ ಕಾಮತ್ ಯೋನಿ ಹಾಗೂ ಸ್ತನಗಳಿಗೆ ಪ್ರಾಧಾನ್ಯಕೊಟ್ಟ ಈ ವಿಗ್ರಹಗಳು ಸಫಲತೆ, ಸಮೃದ್ಧಿಗಳ ಆರಾಧ್ಯ ದೇವತೆಗಳ ರೂಪಗಳಾಗಿವೆ. ಕೆಲವು ಪ್ರಾದೇಶಿಕ ಬದಲಾವಣೆಗಳನ್ನು ಹೊಂದಿದರೂ, ಇಷ್ಟ ಫಲದಾಯಿನಿಯ ರೂಪದಲ್ಲಿ ಭಾವುಕರಿಂದ ಪೂಜಿಸಲ್ಪಡುವ ಜಗಜ್ಜನನಿಯ ಪ್ರತೀಕವಾಗಿ ಮುಂದುವರಿದು ಪ್ರಾಚೀನ ಸಂಪ್ರದಾಯವನ್ನು ಪ್ರತಿನಿಧಿಸುತ್ತವೆ. ಇಂದಿಗೂ ಇದೇ ರೂಪದಲ್ಲಿ ಪೂಜಿಸಲ್ಪಡುವ ಕೆಲವು ಸ್ತ್ರೀ ವಿಗ್ರಹಗಳು ಅಲ್ಲಲ್ಲಿ ಗುಡಿಗಳಲ್ಲಿದ್ದು ಮಕ್ಕಳಾಗದವರು, ವ್ರತೋಪಾಸನೆಗಳನ್ನು ಕೈಕೊಂಡು ವಿಗ್ರಹದ ಯೋನಿ ಸ್ತನಗಳಿಗೆ ಬೆಣ್ಣೆ ಸಿಂಧೂರಗಳ ಲೇಪನ ಅರ್ಚನೆಯ ವಿಧಾನ ಕೈಗೊಳ್ಳುತ್ತಾರೆ. ಉತ್ತರ ಕರ್ನಾಟಕದ ಕೆಲವೆಡೆಗಳಲ್ಲಿ 'ಲಜ್ಜಾಗೌರಿ'ಯೆಂದೇ ಈ ದೇವತೆಯನ್ನು ಗುರುತಿಸುತ್ತಾರೆ. (ಜ್ಯೋತ್ಸ್ನಾ ಕಾಮತ್‌ಷ 1999, ಪು. 11)

ಎನ್ನುತ್ತಾರೆ. ಮಹಿಳಾಪರ ಕಾಳಜಿಯಲ್ಲಿ ರೂಪಗೊಳ್ಳುವ ಬಹುಪಾಲು ಚಿಂತನೆಗಳು ಪುರುಷ ಧೋರಣೆಗಳನ್ನು ಪೋಷಿಸುತ್ತವೆ ಎನ್ನುವುದನ್ನು ಈ ಮೇಲಿನ ವಿದ್ವಾಂಸರ ಹೇಳಿಕೆಗಳು ಸ್ಪಷ್ಟಪಡಿಸುತ್ತವೆ.

ಜನಸಾಮಾನ್ಯರಲ್ಲಿ ಪ್ರಚಲಿತದಲ್ಲಿರುವ 'ಲಜ್ಜಗೌರಿ'ಯನ್ನು ವಿದ್ವತ್ ವಲಯವು 'ಲಜ್ಜಾಗೌರಿ' ಎಂದು ಕರೆಯುತ್ತದೆ. "....ಸಂಸ್ಕೃತದಲ್ಲಿ ಲಂಜಾ ಎಂದರೆ ನಿರ್ಲಜ್ಜ ಸ್ತ್ರೀ, ವೇಶ್ಯೆ, ಲಕ್ಷ್ಮಿ ಎಂಬ ಅರ್ಥಗಳಿವೆ.... ಲಂಜಾ ಎನ್ನುವುದನ್ನು ನಗ್ನತೆಗೆ ಪರ್ಯಾಯವಾಗಿ ಬಳಸಿದಂತಿದೆ. ಲಂಜಾಗೌರಿಗೆ ಸಂಸ್ಕಾರದ ಅಥವಾ ಮಂಗಲೀಕರಣದ ರೂಪ ಕೊಡಲು "ಲಜ್ಜಾಗೌರಿ" ಎಂದು ಕರೆಯಲಾಯಿತು." (ಜ್ಯೋತ್ಸ್ನಾ ಕಾಮತ್‌ಷ 1999, ಪು. 13-14).

ಬಳಕೆ ಭಾಷೆಯಲ್ಲಿ 'ಲಜ್ಜೆ'ಗೆ ಬೇರೆಯದೇ ಆದ ಅರ್ಥವಿದೆ. ಆಡುನುಡಿಯಲ್ಲಿ 'ಲಜ್ಜೆ' ಎಂದರೆ ನಾಚಿಕೆಯುಳ್ಳವಳು, ಲಜ್ಜೆಯನ್ನು ಕಾಪಾಡುವವಳು. 'ಲಜ್ಜೆ'ಯು ಪುರುಷಶಾಹಿ ಸಂಸ್ಕೃತಿಯ ಮಹಿಳೆಗೆ ಆರೋಪಿಸಿದ ಅಂತರ್ಗತ ಮೌಲ್ಯವೂ ಹೌದು. 'ಲಜ್ಜಾಗೌರಿ' ವಿಗ್ರಹದಲಿ ದೃಶ್ಯಕ್ಕೆ ಕಾಣಿಸಿಕೊಳ್ಳುವ ಯೋನಿ, ಸ್ತನಗಳ ಚಿತ್ರಗಳು ಪುರುಷ ಸಂಸ್ಕೃತಿಯು ಆರೋಪಿಸಿದ ಲಜ್ಜೆಯನ್ನು ನಿರಾಕರಿಸುವ ವಿಧಾನವೇ ? ಅಥವಾ ಲಜ್ಜಾಗೌರಿಯು ಮಹಿಳೆಗೆ ಮಾತೃತ್ವದ ಮೂಲಕವೇ ಚಹರೆಯನ್ನು, ಮಾನ್ಯತೆಯನ್ನು ಕಲ್ಪಿಸಿದ ಪಿತೃಪ್ರಧಾನ ಮೌಲ್ಯಗಳ ಪ್ರತಿನಿಧಿಯೆ ? ಇವುಗಳಲ್ಲಿ ಎರಡನೆಯ ಪ್ರಶ್ನೆಯು ಲಜ್ಜಾಗೌರಿಯ ಹಿಂದಿರುವ ಪುರುಷ ರಾಜಕಾರಣವನ್ನು ಸಮರ್ಥವಾಗಿ ಧ್ವನಿಸುತ್ತದೆ.

ಮನುಷ್ಯರ ದೇಹದಲಿ 'ಮುಂಡ'ದಷ್ಟೆ 'ರುಂಡ'ವೂ ಪ್ರಮುಖವಾಗಿದೆ. 'ರುಂಡ'ವು ಕೇವಲ 'ಶಿರಸು' ಅಲ್ಲ, ಅದು ಮುಖವಾಗಿದೆ, ಚಹರೆಯಾಗಿದೆ, ಕಣ್ಣು, ಕಿವಿ, ಮೂಗು, ಬಾಯಿ, ಮೆದುಳು ಮೊದಲಾದ ಪ್ರಮುಖ ಭಾಗಗಳು ರುಂಡದಲ್ಲಿದೆ. 'ಶಿರಸು' ಇಲ್ಲದೆ ಯೋನಿ, ಸ್ತನ, ಗರ್ಭದ ಮೂಲಕ ಗುರುತಿಸಲ್ಪಡುವ ಲಜ್ಜಾಗೌರಿಯ ವಿಗ್ರಹಗಳು ಹೆಣ್ಣಿನ ಕಣ್ಣು ಕಿವಿ, ಬಾಯಿ, ಗಂಟಲು, ಮೆದುಳಿಗಿರುವ ಸಂವೇದನೆಗಳನ್ನು ಸಂಪೂರ್ಣ ನಿರಾಕರಿಸಿದ ಪಿತೃಪ್ರಧಾನ ವ್ಯವಸ್ಥೆಯನ್ನು ಸಮರ್ಥಿಸುವ ಪ್ರತಿನಿಧಿಯಾಗಿದೆ. 'ಕಣ್ಣುಗಳು' ಸಮಾದ ಚಟುವಟಿಕೆಗಳನ್ನು ವೀಕ್ಷಿಸುತ್ತಿರುತ್ತವೆ. 'ಕಿವಿಗಳು' ಸಮಾಜದ ಧ್ವನಿಗಳನ್ನು ಕೇಳಿಸಿಕೊಳ್ಳುತ್ತಿರುತ್ತವೆ. 'ಮೆದುಳು' ಆಲೋಚನೆಯ ಪ್ರತೀಕವಾಗಿದ್ದು, ಬೇಡವಾದರೆ ವಿರೋಧಿಸುವ ಶಕ್ತಿಯನ್ನು ನಾಲಿಗೆಗೆ ಕೊಡುತ್ತದೆ. ಮಹಿಳೆ ನೋಡುವ, ಕೇಳುವ, ಆಲೋಚಿಸುವ, ಅಭಿವ್ಯಕ್ತಿಸುವ ಕ್ರಮಗಳನ್ನು ನಿರಾಕರಿಸುವ ಲಜ್ಜಾಗೌರಿಯ ಪ್ರತಿಮೆಗಳು ಕೇವಲ ಜೀವೋತ್ಪತ್ತಿಯ ನೆಲೆಯಲ್ಲಿಯೇ ಗುರುತಿಸಲ್ಪಟ್ಟಿವೆ.

ಲಜ್ಜಾಗೌರಿಯ 'ದಡ'ದ ಜೊತೆಗೆ 'ಶಿರಸು' ಇದ್ದಿದ್ದರೆ ನೋಡುಗರ ಆಸಕ್ತಿಗಳು ವಿಕೇಂದ್ರೀಕರಣಗೊಳ್ಳುವವು. ಭಾವನೆಗಳು ಹಂಚಿಹೋಗುವವು. ತನ್ನ ಬೇಕು ಬೇಡಗಳನ್ನು ಒಲವು-ನಿಲುವುಗಳನ್ನು ಹೇಳುವ ಸಮರ್ಥಿಸುವ, ಸಂವೇದಿಸುವ ರುಂಡವನ್ನು ಹೊಂದಿರದ ಲಜ್ಜಾಗೌರಿಯ ವಿಗ್ರಹಗಳು ನಿರ್ದಿಷ್ಟ ಭಾವನೆಗಳನ್ನು ಮಾತ್ರ ಪ್ರಚೋದಿಸುವ ಪ್ರತಿಮೆಗಳಾಗಿವೆ. ಲಜ್ಜಾಗೌರಿಯ ವಿಗ್ರಹಗಳು ಹೆಣ್ಣನ್ನು ಉಪಭೋಗ ಮತ್ತು ಸರಕು ಸಂಸ್ಕೃತಿಯಲ್ಲಿ ನಿರ್ವಚಿಸಿದ್ದನ್ನೇ ಪ್ರತಿನಿಧಿಸುತ್ತದೆ. ಲಜ್ಜಾಗೌರಿ ಪ್ರತಿಮೆ ನೀಡುವ ಅರ್ಥಕ್ಕೂ, ವಾಸ್ತವ ಜೀವನದಲ್ಲಿ ಹೆಣ್ಣನ್ನು ಪರಿಗಣಿಸಿದ ರೀತಿಗೂ ಅಂತಹ ವ್ಯತ್ಯಾಸವೇನೂ ಇಲ್ಲ. ಕಾಮ ಮತ್ತು ಮಾತೃತ್ವವನ್ನು ಭೋಗ ಮತ್ತು ಉಪಭೋಗದ ನೆಲೆಯಲ್ಲಿಯೇ ಅರ್ಥೈಸಿದ್ದನ್ನು ಲಜ್ಜಾಗೌರಿಯ ವಿಗ್ರಹಗಳು ಬಹಿರಂಗಪಡಿಸುತ್ತವೆ.

ಲಜ್ಜಾಗೌರಿಯ ಬತ್ತಲೆಗೂ ಭೈರವನ ಬತ್ತಲೆಗೂ ಬಹಳ ವ್ಯತ್ಯಾಸವಿದೆ. ದೊರೆತ ಲಜ್ಜಾಗೌರಿಯ ವಿಗ್ರಹಗಳಲ್ಲಿ ಕೆಲವು ಸಂಭೋಗ ಭಂಗಿಯಲ್ಲಿದ್ದರೆ, ಮತ್ತೆ ಕೆಲವು ಪ್ರಸೂತಿ ಭಂಗಿಯಲ್ಲಿವೆ. ಮುಖಸಹಿತ ದೊರೆಯುವ ಭೈರವ ವಿಗ್ರಹಗಳು ಪುರುಷಶಾಹಿ ಸಮಾಜವು ಪುರುಷರನ್ನು ಕೇಂದ್ರವಾಗಿಟ್ಟುಕೊಂಡು

ಹೆಣೆದ ಮೌಲ್ಯಗಳನ್ನೇ ಪ್ರತಿಪಾದಿಸುತ್ತವೆ. ಪ್ರಬಲ, ಶಕ್ತಿವಂತ, ವೀರ, ಪರಿಪೂರ್ಣ, ಆತ್ಮವಿಶ್ವಾಸಿ, ವಿಚಾರವಂತ, ಧೈರ್ಯವಂತ- ಈ ಮೊದಲಾದ ಮೌಲ್ಯಗಳನ್ನೇ ಬತ್ತಲೆ ಭೈರವ ವಿಗ್ರಹ ಪ್ರತಿನಿಧಿಸುತ್ತದೆ.

ಲಜ್ಜಾಗೌರಿಯ ಆಚರಣೆಯಲ್ಲಿ ತೊಡಗುವ ಮಹಿಳೆಯರ ಭಾವಜಗತ್ತು ಪುರುಷ ನಿಷ್ಠ ಮೌಲ್ಯಗಳನ್ನೇ ಪ್ರತಿಬಿಂಬಿಸುತ್ತದೆ. ಮಕ್ಕಳಾಗದವರು ಮಾತ್ರ ಲಜ್ಜಾಗೌರಿಗೆ ನಡೆದುಕೊಳ್ಳುತ್ತಾರೆ. ಪುರುಷಶಾಹಿ ಕುಟುಂಬದಲ್ಲಿ ಭದ್ರತೆಯನ್ನು, ಸಮಾಜದಲ್ಲಿ ಸ್ಥಾನವನ್ನು ಪಡೆಯಬೇಕಾದರೆ ಮದುವೆಯಾದ ಹೆಣ್ಣು ತಾಯಿಯಾಗಬೇಕಾಗುತ್ತದೆ. ಮಾತೃತ್ವವನ್ನು ಬಲವಾಗಿ ಅಪೇಕ್ಷಿಸುವ ಪುರುಷಪ್ರಧಾನ ನಿಲುವುಗಳನ್ನು ಲಜ್ಜಾಗೌರಿಯ ಆಚರಣೆಗಳು ಪ್ರತಿಪಾದಿಸುತ್ತವೆ.

ಲಜ್ಜಾಗೌರಿಯ ಕುರಿತಿರುವ ಮಿಥ್‌ಗಳು ಹೆಣ್ಣು ಶೋಷಿತ ಸ್ಥಾನದಲ್ಲಿರುವುದನ್ನೇ ಪ್ರತಿಪಾದಿಸುತ್ತದೆ. ಲೇಲೇ ಶಾಸ್ತ್ರೀಯವರು ಹೇಳಿದ ಮಹಾಕೂಟದ ಜನಸಾಮಾನ್ಯರಲಿ ಪ್ರಚಲಿತದಲ್ಲಿದ್ದ ಲಜ್ಜಾಗೌರಿಯ ಕಥೆಯನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಲ್ಲಿನ ಜನರು ಹೇಳುವ ಕಥೆಯು ಇಂತಿದೆ : ಒಮ್ಮೆ ಶಿವನು ವಿನೋದವಾಗಿ ತನ್ನ ಹೆಂಡತಿ ಪಾರ್ವತಿಯ ಸತ್ವವನ್ನು ಪರೀಕ್ಷಿಸುವ ಉದ್ದೇಶದಿಂದ ತನ್ನ ಕೌದಿಯೊಂದನ್ನು ಜೋಪಾನವಾಗಿಡಬೇಕೆಂದು ಹೇಳಿ ಆಕೆಯ ಕೈಗೆ ಕೊಟ್ಟನು. ಅನಂತರ ತಾನೇ ಇಲಿಯ ರೂಪವನ್ನು ಧರಿಸಿ ಅದರಲ್ಲಿ ಮೂವತ್ತು ರಂಧ್ರಗಳನ್ನು ಮಾಡಿದನು. ಪಾರ್ವತಿ, ಇಲಿಯು ಕತ್ತರಿಸಿರುವ ಆ ಕೌದಿಯನ್ನು ನೋಡಿದೊಡನೆ ಶಿವನ ಕೋಪದ ನೆನಪಾಗಿ ಹೆದರಿಬಿಟ್ಟಳು. ಆಗ್ಗ ಶಿವನು ಸಿಂಪಿಗ (ದರ್ಜಿ)ನ ವೇಷದಲ್ಲಿ ಅಲ್ಲಿಗೆ ಬಂದನು. ಪಾರ್ವತಿಯು ತನ್ನ ಕೌದಿಯನ್ನು ಹೊಲಿದು ಕೊಡಬೇಕೆಂದು ಅವನಲ್ಲಿ ಕೇಳಿಕೊಂಡಳು. ಸಿಂಪಿಗನಾದರೋ 'ನಾನು ನಿನ್ನೊಡನೆ ರಮಿಸಲು ಅನುವು ಮಾಡಿಕೊಡುವುದಾದರೆ ಮಾತ್ರ ಈ ಕೌದಿಯನ್ನು ಮುನ್ನಿನ ಹಾಗೆ ಮಾಡಿಕೊಡುವುದಾಗಿ ಹೇಳಿದನು.' ಶಿವನ ಉಗ್ರ ಕೋಪಕ್ಕೆ ಹೆದರಿದ್ದ ಪಾರ್ವತಿಯು ಅವನ ಇಚ್ಛೆಗೆ ಸಮ್ಮತಿಸಿದಳು. ಕೌದಿಯನ್ನು ಹೊಲಿದುಕೊಟ್ಟಾದ ಮೇಲೆ ಈರ್ವರೂ ಸಂಭೋಗ ಕ್ರಿಯೆಯಲ್ಲಿ ನಿರತರಾಗಿದ್ದಾಗ ಶಿವನು ಸಿಂಪಿಗನ ರೂಪವನ್ನು ಬಿಟ್ಟು ನಿಜರೂಪದಲ್ಲಿ ಪ್ರತ್ಯಕ್ಷನಾದನು ! ಅವನನ್ನು ಕಂಡೊಡನೆ ಪಾರ್ವತಿಯು ಅತ್ಯಂತ ನಾಚಿಕೆಯಿಂದ ಕುಗ್ಗಿ ಹೋದಳು ! ತತ್ಪರಿಣಾಮವಾಗಿ ಅವಳ ಮಸ್ತಕವು (ರುಂಡ) ತತ್ಕಾಲಕ್ಕೆ ಸಂಪೂರ್ಣವಾಗಿ ಕರಗಿಬಿಟ್ಟಿತು. ಶರೀರ ಮಾತ್ರ ಯಾವ ಸ್ಥಿತಿಯಲ್ಲಿತ್ತೋ ಅದೇ ಸ್ಥಿತಿಯಲ್ಲಿ ಉಳಿದುಬಿಟ್ಟಿತ್ತು. (ಲೇಲೇ ಶಾಸ್ತ್ರೀ, ಉದ್ಧೃತ ; ರಾಮಚಂದ್ರ ಚಿಂತಾಮಣ ಢೇರೆ, 2003, ಪು. 15).

ಭಾರತೀಯ ಸಂಸ್ಕೃತಿಗಳು ಪಾತಿವ್ರತ್ಯ ಪರೀಕ್ಷೆಗಳನ್ನು ನ್ಯಾಯೋಚಿತವಾಗಿಯೇ ಕಂಡಿವೆ. ಸ್ತ್ರೀಯರ 'ಶೀಲ' ಶಂಕಿಸುವವರು, ಪರೀಕ್ಷಿಸುವವರು ಪುರುಷರು. ಈ 'ಪಾತಿವ್ರತ್ಯ' ಪರೀಕ್ಷೆಯಲ್ಲಿ ಪಾಸಾಗಲು ಹೆಣಗುವವರು ಮಹಿಳೆಯರಾಗಿರುತ್ತಾರೆ.

ಪಾತಿವ್ರತ್ಯ ಪರೀಕ್ಷೆಯು ಹೆಣ್ಣಿನ ಪಾಲಿಗೆ ಬರಿ ಶೀಲದ ಪರೀಕ್ಷೆಯಾಗಿರುವುದಿಲ್ಲ. ಅದು ಅವಳ ಭವಿಷತ್ತಿನ ಪ್ರಶ್ನೆಯೂ ಆಗಿರುತ್ತದೆ. ಪಾತಿವ್ರತ್ಯವನ್ನು ಪರೀಕ್ಷಿಸುವವನು ಪ್ರಥಮ ದರ್ಜೆಯ ಪ್ರಜೆಯಾಗಿ, ಪರೀಕ್ಷೆಗೆ ಒಳಪಡುವವಳು ಎರಡನೆಯ ದರ್ಜೆಯ ಪ್ರಜೆಯಾಗಿ ನಿಲ್ಲುವಳು. ಪಾತಿವ್ರತ್ಯದ ಒಟ್ಟು ಪರೀಕ್ಷಾ ಪ್ರಕ್ರಿಯೆಯು ಸಮಾಜದ ಲಿಂಗಶ್ರೇಣೀಕರಣಕ್ಕನುಗುಣವಾಗಿ ಪುರುಷನನ್ನು ಯಜಮಾನ ಸ್ಥಾನದಲ್ಲಿ, ಸ್ತ್ರೀಯನ್ನು ದಾಸಿಯ ಸ್ಥಾನದಲ್ಲಿ ನಿಲ್ಲಿಸುತ್ತದೆ. ಈ ಪರೀಕ್ಷೆಯಲ್ಲಿ ಅವಳು ಎದುರಿಸುವ ಮಾನಾಪಮಾನಗಳು, ತಲ್ಲಣಗಳು, ಅತಂತ್ರಗಳು, ದೈಹಿಕ ಹಿಂಸೆಗಳು, ಮಾನಸಿಕ ಹಿಂಸೆಗಳ ಕುರಿತು ಪುರಷಶಾಹಿ ಸಂಸ್ಕೃತಿ ಜಾಣ ಮೌನ ತಳೆದಿದೆ.

ಪಾತಿವ್ರತ್ಯ ಪರೀಕ್ಷೆಗಳನ್ನು ಎರಡು ಬಗೆಯಲ್ಲಿ ವಿಂಗಡಿಸಬಹುದು. : 1) ನಿರೀಕ್ಷಿತ ಪಾತಿವ್ರತ್ಯ ಪರೀಕ್ಷೆ, ಇದರಲ್ಲಿ ಮಹಿಳೆಗೆ ಪೂರ್ವಸೂಚನೆ ನೀಡಿಯೇ ಪರೀಕ್ಷೆ ನಡೆಸಲಾಗುವುದು ಮತ್ತು ಅವಳು ಮೊದಲೇ ಶೀಲ ಶಂಕೆಗೆ ಗುರಿಯಾಗಿರುತ್ತಾಳೆ. 2) ಅನಿರೀಕ್ಷಿತ ಪಾತಿವ್ರತ್ಯ ಪರೀಕ್ಷೆ, ಇಲ್ಲಿ ಯಾವ ಮುನ್ಸೂಚನೆಯೂ ಕೊಡದೆ ಅವಳರಿವಿಗೆ ಬರದಂತೆ ಪಾತಿವ್ರತ್ಯ ಪರೀಕ್ಷೆಗಳು ನಡೆಯುತ್ತವೆ. ಇಂತಹ ಪರೀಕ್ಷೆಗೆ ಒಳಪಡುವ ಸ್ತ್ರೀಯರ ಚಾರಿತ್ರ್ಯದ ಕುರಿತು ಯಾವ ಅನುಮಾನಗಳು ಇರುವುದಿಲ್ಲ. ಆದರೆ ಹೆಣ್ಣಿನ ಮನೋನಿಗ್ರಹವನ್ನು ಒರೆಹಚ್ಚಿ ನೋಡಲು ಈ ಬಗೆಯ ಪರೀಕ್ಷೆಗಳು ನಡೆಯುತ್ತರೆ. ನಿರೀಕ್ಷಿತ ಹಾಗೂ ಅನಿರೀಕ್ಷಿತ ಪಾತಿವ್ರತ್ಯ ಪರೀಕ್ಷೆಗಳಲ್ಲಿ ಎರಡನೆಯ ಪರೀಕ್ಷೆ ಹೆಣ್ಣಿಗೆ ಹೆಚ್ಚು ಮಾನಸಿಕ ಆಘಾತವನ್ನುಂಟುಮಾಡುತ್ತದೆ. ನಿರೀಕ್ಷಿತ ಪಾತಿವ್ರತ್ಯ ಪರೀಕ್ಷೆಯಲ್ಲಿ ಮಹಿಳೆ ಮಾನಸಿಕ ಹಾಗೂ ದೈಹಿಕ ಹಿಂಸೆಗಳಿಗೆ ಒಳಗಾಗುತ್ತಾಳಾದರೂ, ಕೊನೆಯ ಪಕ್ಷ ಅವಳಿಗೆ ತನ್ನ ಮೇಲಿನ ಆಪಾದನೆಗಳ ಕುರಿತು ಅರಿವಿರುತ್ತದೆ. ಅನಿರೀಕ್ಷಿತ ಪಾತಿವ್ರತ್ಯ ಪರೀಕ್ಷೆಗೆ ಒಳಪಡುವ ಸ್ತ್ರೀಗೆ, ತಾನು ಪ್ರತಿ ಕ್ಷಣವು ಪರೀಕ್ಷೆಗೆ ಗುರಿಯಾಗುತ್ತಿದ್ದೇನೆ ಎನ್ನುವ ಅರಿವು, ತಿಳುವಳಿಕೆ, ಪ್ರಜ್ಞೆ ಅವಳಿಗಿರುವುದೇ ಇಲ್ಲ. ಅರಿವಿಗೆ ಬಾರದೆ ಪರೀಕ್ಷೆಗಳು ನಡೆದು ಹೋಗುತ್ತವೆ. ಅನಂತರದಲ್ಲಿ ತಾನು ಪಾತಿವ್ರತ್ಯ ಪರೀಕ್ಷೆಗೆ ಒಳಗಾಗಿದ್ದೆ ಎಂದು ತಿಳಿದು ಬಂದಾಗ, ಆಕೆಗೆ ಹೆಚ್ಚು ಆಘಾತವಾಗುತ್ತದೆ, ನೋವಾಗುತ್ತದೆ. ಸ್ತ್ರೀಯ ಪ್ರಜ್ಞೆಗೆ ಬರದೆ ನಡೆದ ಪರೀಕ್ಷೆಗಳಲ್ಲಿ ಅವಳು ಪಾಸಾಗಿದ್ದರೆ ಆ ಮಾತು ಬೇರೆ.

ಒಂದು ವೇಳೆ ಸೋತಿದ್ದರೆ ? ಶೀಲ ಪರೀಕ್ಷೆಯಲ್ಲಿ ಪರಾಜಯ ಹೊಂದಿದ ಪರಿಣಾಮ, ಪಾತಿವ್ರತ್ಯ ಪರೀಕ್ಷೆಗೆ ಗುರಿಯಾದ ಮಹಿಳೆ ಮನಸ್ಸಿನ ಮೇಲೆ ತೀವ್ರ ನೋವನ್ನು ಸೃಷ್ಟಿಸುತ್ತದೆ. ಹೇಳಿಕೊಳ್ಳಲಾಗದ ಹತಾಶೆ, ತಲ್ಲಣಗಳು ಅವಳನ್ನು ಹುರಿದು ಮುಕ್ಕುತ್ತವೆ. ಅನಿರೀಕ್ಷಿತ ಪಾತಿವ್ರತ್ಯ ಪರೀಕ್ಷೆಗೆ ಒಳಪಟ್ಟ ಹೆಣ್ಣು, ತನ್ನ ಇಷ್ಟದಂತೆ ಮತ್ತೊಬ್ಬನನ್ನು ಕೂಡಿ ಸಿಕ್ಕಿ ಬಿದ್ದಿರಬಹುದು ಇಲ್ಲವೆ ಬೇಡವಾಗಿ ಪರಪುರುಷನನ್ನು ಕೂಡುವ ಪ್ರಸಂಗಗಳ ಹಿಂದೆ ಪರಿಸ್ಥಿತಿಯ ಒತ್ತಡ ಇದ್ದೇ ಇರುತ್ತದೆ. ತಾನೇಕೆ ಇಂತಹ ಪ್ರಸಂಗಕ್ಕೆ ಆಹುತಿಯಾಗುವುದು ಅನಿವಾರ್ಯವಾಯಿತು ಎಂದು ಹೇಳುವ ಸ್ಥಿತಿಯಲ್ಲಿ ಅವಳಿರುವುದಿಲ್ಲ. ಕೇಳುವ ಸ್ಥಿತಿಯಲ್ಲಿ ಗಂಡನಿರುವುದಿಲ್ಲ. ಇಂತಹ ಸನ್ನಿವೇಶಗಳಲ್ಲಿ ಅವಳೇನೇ ಹೇಳಿದರೂ ಅದು ಅವಳನ್ನು ಸಮರ್ಥಿಸುವುದಿಲ್ಲ. ಒಂದು ವೇಳೆ ಹೇಳಲು ಪ್ರಯತ್ನಿಸಿದರೂ, ತಪ್ಪಿನಿಂದ ಜಾರಿಕೊಳ್ಳಲು ನಡೆಸುವ ಬಡಬಡಿಕೆಯಾಗಿಯೇ ಕಂಡುಬರುತ್ತದೆ. ಮುಖ್ಯವಾದ ಸಂಗತಿಯೆಂದರೆ ಇಂತಹ ಪ್ರಸಂಗಗಳಲ್ಲಿ ಹೇಳುವ ಕೇಳುವ ವೇದಿಕೆ ಸೃಷ್ಟಿಯಾಗುವುದೇ ಇಲ್ಲ. ಇಂತಹ ಸನ್ನಿವೇಶಕ್ಕೆ ಸಿಕ್ಕಿಕೊಂಡ ಮಹಿಳೆ ಗಂಡನಿಂದ ಮತ್ತು ಸಂದರ್ಭದ ಲಾಭ ಪಡೆದು ಅತ್ಯಾಚಾರವೆಸಗಿದ ವ್ಯಕ್ತಿಯಿಂದ, ಏಕಕಾಲದಲ್ಲಿ ಇಬ್ಬರು ಗಂಡಸರಿಂದ ಅನ್ಯಾಯಕ್ಕೊಳಗಾಗಿರುತ್ತಾಳೆ. ಇಂತಹ ಶೋಷಣೆಗೆ ಒಳಗಾಗದ ಪಾರ್ವತಿಯ ತಳಮಳಗಳನ್ನು ತಲ್ಲಣಗಳನ್ನು, ಅಪಮಾನಗಳನ್ನು, ಅನುಭವಿಸಿದ ಹಿಂಸೆಗಳನ್ನು ಅರ್ಥಮಾಡಿಕೊಳ್ಳಬೇಕಿದೆ. ಮೇಲಿನ ಕಥೆಯನ್ನು ಅವಲೋಕಿಸಿದರೆ ಪಾರ್ವತಿಗೆ ಎರಡು ಆಯ್ಕೆಗಳಿದ್ದುದು ಸ್ಪಷ್ಟವಾಗಿ ಕಾಣುತ್ತವೆ. 1) ನೇರವಾಗಿ ಶಿವನಿಗೆ 'ನೀವು ಕೊಟ್ಟ ಕೌದಿಯನ್ನು ಇಲಿ ತಿಂದು ಹಾಕಿದೆ' ಎಂದು ಹೇಳುವುದು. 2) 'ಕೌದಿ ಸರಿ ಮಾಡಿ ಕೊಡುತ್ತೇನೆ. ಇದಕ್ಕೆ ಪ್ರತಿಯಾಗಿ ಭೋಗ ಸುಖವನ್ನು ನೀಡಬೇಕು' ಎಂದ ಸಿಂಪಿಗನ ಬೇಡಿಕೆಯನ್ನು ಪೂರೈಸುವುದು. ಈ ಅವಕಾಶಗಳಲ್ಲಿ ಪಾರ್ವತಿ ಆಯ್ಕೆ ಮಾಡಿಕೊಂಡದ್ದು ಎರಡನೆಯದನ್ನು, ಅಂದರೆ ಎರಡನೆಯ ಆಯ್ಕೆಗಿಂತಲೂ ಮೊದಲನೆಯ ಆಯ್ಕೆ ಹೆಚ್ಚು ಭೀಕರವಾಗಿದೆ ಎಂದಾಯಿತು. ಗಂಡನ ಸಿಟ್ಟನ್ನು ಎದುರಿಸುವುದಕ್ಕಿಂತಲೂ ಸಿಂಪಿಗನಿಗೆ ಮೈಯೊಪ್ಪಿಸುವುದೇ ಮೇಲು ಎನ್ನುವುದು ಪಾರ್ವತಿಗೆ ಹೆಚ್ಚು ಸುರಕ್ಷಿತವಾಗಿ ಕಾಣುತ್ತದೆ. ಗಂಡನೆನಿಸಿಕೊಂಡವನು ಹೆಂಡತಿಯನ್ನು ಎಷ್ಟು ಕ್ರೂರವಾಗಿ ನಡೆಸಿಕೊಳ್ಳುತ್ತಿದ್ದನು ಎನ್ನುವ ಸತ್ಯವನ್ನೇ ಈ ಕಥೆಯು ಬಿಚ್ಚಿಡುತ್ತದೆ. ಪತಿಗಿರಬಹುದು, ಪರಪುರುಷನಿಗಿರಬಹುದು, ಸುಲಭವಾಗಿ ಭೋಗಾಸಕ್ತಿಗೆ ಬಲಿಯಾಗುವ ಹೆಣ್ಣಿನ ಪ್ರತಿನಿಧಿಯಾಗಿ ಪಾರ್ವತಿ ಚಿತ್ರಿತವಾಗಿರುವಳು. ಇಂತಹ ಮಿಥ್ ಹಿನ್ನೆಲೆಯುಳ್ಳ ಲಜ್ಜಾಗೌರಿಯನ್ನು ಸ್ತ್ರೀಶಕ್ತಿ ನೆಲೆಯಲ್ಲಿ ವಿಶ್ಲೇಷಿಸಲಾಗದು.

ಯೋನಿ, ಗರ್ಭ, ಸ್ತನಗಳ ಮೂಲಕ ಭೋಗ, ಉಪಭೋಗದ ನೆಲೆಗಳಲ್ಲಿ ಗೌರವಿಸಲ್ಪಡುವ ಲಜ್ಜಾಗೌರಿಯಂತಹ ಮಾತೃದೇವತೆಗಳನ್ನು ವಸ್ತುನಿಷ್ಠವಾಗಿ ವಿಶ್ಲೇಷಣೆಗೆ ಗುರಿಪಡಿಸುವ ಜರೂರಿದೆ. ಹೆಣ್ಣಿನ ಬೌದ್ಧಿಕತೆಯನ್ನು, ಸೃಜನಶೀಲತೆಯನ್ನು ನಿರಾಕರಿಸುವ ಸಾಂಸ್ಕೃತಿಕ ಕಥನಗಳು ಮರು ಓದು ನಡೆಯಬೇಕಿದೆ. ಮುಖ ಸಹಿತ ಶರೀರವು ಮನುಷ್ಯರಾಗಿ ವ್ಯಕ್ತಿಗತ ನೆಲೆಯಲ್ಲಿ ಗುರುತಿಸಲ್ಪಟ್ಟರೆ ಮುಖ ರಹಿತ ಹೆಣ್ಣಿನ ಶರೀರವು ಭೂಮಿಯಂತೆ ಪರಿಗಣಿಸಲ್ಪಡುತ್ತದೆ. ಪ್ರಕೃತಿ ನೆಲೆಯಿಂದ ಬಿಡಿಸಿಕೊಂಡು, ಕುಟುಂಬದಲ್ಲಿ, ಸಮಾಜದಲ್ಲಿ ವೈಯಕ್ತಿಕ ಅಸ್ಮಿತೆಯನ್ನು ಪ್ರತಿಪಾದಿಸುತ್ತಿರುವ ಮಹಿಳಾ ಅಧ್ಯಯನಕಾರರು, ಅಲೌಕಿಕ ಪ್ರತಿಮೆಗಳ ಮೂಲಕ ಹೆಣ್ಣನ್ನು ಪ್ರಕೃತಿ ನೆಲೆಯಲ್ಲಿಟ್ಟು ಚರ್ಚಿಸುವ ಲಜ್ಜಾಗೌರಿಯಂತಹ ಮಿಥ್‌ಗಳನ್ನು ಕೈಬಿಡಬೇಕಾಗಿದೆ.

ಮಾತೃದೇವತೆಗಳು ಪಿತೃಪ್ರಧಾನ ವ್ಯವಸ್ಥೆಯ ಸಾಂಸ್ಕೃತಿಕ ಮನೋಭಾವವನ್ನು ಬಿಚ್ಚಿಡುತ್ತವೆ. ಅವರುಗಳು ಪಿತೃಪ್ರಧಾನ ವ್ಯವಸ್ಥೆಯ ಒಳಪದರುಗಳಲ್ಲಿನ ಪ್ರವೃತ್ತಿಗಳನ್ನು ಬಹಿರಂಗಗೊಳಿಸುತ್ತವೆ. ಪುರುಷನಿಷ್ಠ ಮೌಲ್ಯಗಳಿಗೆ ಮಾತೃದೇವತೆಗಳು ಪೂರಕವಾಗಿಲ್ಲದೆ ಹೋಗಿದ್ದರೆ, ಅವರ ಅಸ್ತಿತ್ವದ ಚಹರೆಗಳನ್ನು ನಮ್ಮ ಸಮಾಜ ವ್ಯವಸ್ಥಿತವಾಗಿ ಅಳಿಸಿ ಹಾಕಿರುತ್ತಿತ್ತು. ಮಾತೃದೇವತೆಗಳು ಪಿತೃನಿಷ್ಠವಾಗಿರುವುದರಿಂದಲೇ ಎಂದಿನಂತೆ ಇಂದಿಗೂ ದೃಢವಾದ ಸ್ಥಾನವನ್ನು ಪಡೆದುಕೊಂಡಿದೆ. ಪಿತೃಪ್ರಧಾನ ಮೌಲ್ಯಗಳ ಹೆಚ್ಚಳವನ್ನು, ಶ್ರೇಷ್ಠತೆಯನ್ನು, ಆಶಯಗಳನ್ನು ಉದ್ಘೋಷಿಸುವ ಮಾತೃದೈವಗಳು ಪುರುಷಾಕೃತಿಯಲ್ಲಿ ರೂಪ ಪಡೆದವುಗಳೇ ಹೊರತು ಸ್ತ್ರೀ ನಿಷ್ಠ ಪ್ರತಿನಿಧಿಗಳಲ್ಲ.

ಕಂಬನಿ

ವಿಚಾರವಾದಿ, ಪ್ರಗತಿಪರ ಶಿಕ್ಷಕ, ಕರ್ನಾಟಕದ ಸಾಂಸ್ಕೃತಿಕ ಜೀವನದ ಪ್ರಮುಖ ವ್ಯಕ್ತಿ ಹಸನ್ಮುಖಿ ದಿವಂಗತ ಹೆಚ್. ನರಸಿಂಹಯ್ಯನವರಿಗೆ 'ಅಚಲ' ಗೌರವಪೂರ್ವಕವಾಗಿ ಶ್ರದ್ಧಾಂಜಲಿಯನ್ನರ್ಪಿಸುತ್ತದೆ.

ಪುಸ್ತಕ ಪರಿಚಯ

- ನೇಮಿಚಂದ್ರ

'ಜಮುರು ಮಳೆ' (ಕಥಾಸಂಕಲನ)
ಲೇಖಕಿ : ಸುಮಂಗಲಾ
ಛಂದ ಪುಸ್ತಕ ಪ್ರಕಾಶನ
1-004, ಮಂತ್ರಿ ಪ್ಯಾರಡೈಸ್, ಬನ್ನೇರುಘಟ್ಟ ರಸ್ತೆ
ಬೆಂಗಳೂರು - 560 076.
ಪುಟಗಳು : 162 ಬೆಲೆ : 60 ರೂ.

'ಜಮುರು ಮಳೆ: ಹೆಸರಲ್ಲೇ ಎದೆಯನ್ನು ಒದ್ದೆಯಾಗಿಸುವ, ತೇವವಾಗಿಸುವ ಗುಣವಿದೆ. ಇಲ್ಲಿಯ ಕತೆಗಳನ್ನು ಓದುವಾಗ, ಸುರಿವ ಮಳೆಯಲ್ಲಿ ಹರವಿ ಇಟ್ಟ ನೆನಪುಗಳ ಬುತ್ತಿ ಬಿಚ್ಚಿ ಪಡಸಾಲೆಯಲ್ಲಿ ಬೆಚ್ಚಗೆ ಕುಳಿತ ನೆಚ್ಚನೆಯ ಭಾವ.

ಸುಮಂಗಲ ಅವರಿಗೆ ಎಂತಹ ಸೂಕ್ಷ್ಮ ಅವಲೋಕನಾ ಶಕ್ತಿ ಇದೆ ಎಂದರೆ, ಕಂಡದ್ದನ್ನೆಲ್ಲ ಗ್ರಹಿಸುವ, ನೆನಪಿನಲ್ಲಿ ಸಂಗ್ರಹಿಸುವ, ಒಂದು ರೀತಿಯ ಫೋಟೋಗ್ರಫಿಕ್ ಮೆಮೊರಿ ಅವರಿಗಿದೆ ಎಂದು ಅನಿಸುತ್ತೆ. ಅವರು ಏನನ್ನೇ ವಿವರಿಸಲಿ, ಆ ಚಿತ್ರ ನಮ್ಮ ಕಣ್ಣೆದುರು ನಿಂತು ಬಿಡುತ್ತದೆ - ಬಸ್ಸಿನೊಳಗಿನ ಗಂಡ ಹೆಂಡತಿಯರ ಜಗಳ, ಆಸ್ಪತ್ರೆಯಲ್ಲಿಯ ಪ್ರಸೂತಿಯ ಜಾಗ, ಅವಿವಾಹಿತ ಟೀಚರ್ ಒಬ್ಬರ ಅಸ್ತವ್ಯಸ್ತ ಮನೆ.... ಎಲ್ಲವೂ ಬಿಡಿಸಿಟ್ಟ ಚಿತ್ರದಂತೆ ಸವಿವರವಾಗಿ ನಮ್ಮೆದುರು ತೆರೆದುಕೊಳ್ಳುತ್ತವೆ.

ಇವರ ಪಾತ್ರಗಳ ವೈವಿಧ್ಯವೂ ಅದ್ಭುತವಾಗಿದೆ. ಅವರಿವರ ಬದುಕಿನ ಒಳಹೊಕ್ಕು, ಒಳ ಪದರುಗಳಲ್ಲಿ ಇಳಿದು, ಮಡಿಕೆಗಳನ್ನು ಸದ್ದಿಲ್ಲದೆ ಬಿಡಿಸಿ ಬರೆಯುವ ನಿರಾಯಾಸ ಶೈಲಿ ಇವರದು. ಬದುಕಿಗೆ ತೆರೆದುಕೊಂಡ ಬರಹಗಾರ್ತಿ ಮಾತ್ರ ನೀಡಬಲ್ಲ ಕತೆಗಳನ್ನು ಇಲ್ಲಿ ನಾವು ಕಾಣುತ್ತೇವೆ. ಹಾಗೆಂದೆ, ಇವರು ಪಾನ್ ಅಂಗಡಿ ಇಟ್ಟಾನತ ಬಗ್ಗೆ, ಕೊಳಚೆ ಪ್ರದೇಶದಲ್ಲಿ ವಾಸಿಸುವರ ಕನಸಿನ ಬಗ್ಗೆ, ಮಳೆ ಇಲ್ಲದ ನೆಲದಿಂದ ಗುಳೆ ಬಂದವರ ಬಗ್ಗೆ ಮುಸಲ್ಮಾನ ಕೆಲಸದಾಕಿಯ ಅಂತರಂಗದ ಬಗ್ಗೆ, ಬಲು ಸರಳವಾಗಿ ಬರೆಯಬಲ್ಲರು.

ಮುನ್ನುಡಿಯಲ್ಲಿ ಜಿ.ಎಸ್. ಸದಾಶಿವ ಅವರು ಹೇಳುತ್ತಾರೆ 'ವಿಷಾದ ಈ ಕಥೆಗಳ ಸ್ಥಾಯಿ ಬಾವ, ಆ ರಾಗದ ಹಿಂದಿನ ಭಾವ, ಎಂಥದೋ ವ್ಯಾಕುಲತೆ... ಎದೆಯಾಳಕ್ಕೆ ಇಳಿದು ಏನೋ ತಲ್ಲಣ' ಎಂಬಂಥ ಭಾವನೆ ಅವರ ಯಾವ ಕಥೆಯನ್ನು ಓದಿದರೂ ಬರುವುದು ಸಾಧ್ಯ. ಮನುಷ್ಯ ಸಂಬಂಧಗಳ ಹಿಂದಿನ ನೋವಿನ ಎಳೆಯನ್ನು ಬಿಡಿಸತೊಡಗಿದಾಗ ಈ ವಿಷಾದ ರಾಗ ಅನುರಣಿಸುವುದು ಸಹಜ' ಎನ್ನುತ್ತಾರೆ. ಅವರು ಹೇಳುವಂತೆ ಇವರ ಬಹಳಷ್ಟು ಕತೆಗಳಲ್ಲಿ ವಿಷಾದ ಸ್ಥಾಯಿ ಭಾವವಾಗಿರುವುದು ನಿಜ, ಆದರೆ ವಿಷಾದ ಸ್ಥಾಯಿಯಾಗದೆ ಬದುಕಿನ ಮಾನವೀಯ ಸಾಧ್ಯತೆಯಾಗುವ ಇವರ 'ಎದೆಯಲ್ಲೊಂದು ಬಳೆ ಚೂರು', 'ಎದೆ ಭೂಮಿಗೆ ಬರಬೀಳದಿರಲಿ' ಮತ್ತು 'ಫಾತೀಮಾಗೆ ಮಳೆಯೆಂದರೆ ಇಷ್ಟ' ಕತೆಗಳು - ನನಗೆ ತುಂಬಾ ಇಷ್ಟವಾದುವು. ಕಾರಣ, ಮನುಷ್ಯ ಸಂಬಂಧಗಳ ಹಿಂದೆ ನೋವಿನ ಎಳೆಗಳು ಬಿಡಿಸಿದಾಗಲು, ಮನುಷ್ಯ ಸಂಬಂಧಗಳ ಅನಂತ ಸಾಧ್ಯತೆಗಳನ್ನು ಬಿಡಿಸುವ ಕತೆಗಳು ಇವು. ಇಲ್ಲಿ ಮತ್ತೊಮ್ಮೆ ಮನುಷ್ಯತ್ವದಲ್ಲಿ ಭರವಸೆ ಮೂಡುತ್ತದೆ. ಜೀವನ ಪ್ರೀತಿ ಕುಸುಮಿಸುತ್ತದೆ, ಬದುಕಿಗೆ ಹುಮ್ಮಸ್ಸು ಲವಲವಿಕೆ, ಚೈತನ್ಯ ಮೈಗೂಡಿ ಕತೆಗಳು ಲಕಲಕಿಸುತ್ತವೆ. 'ಮುಸಲರ ಹುಡುಗನನ್ನು ಸಾಕುವ ಆಯಿ'ಯಾಗಿ, ತಾನು ಕೆಲಸ ಮಾಡುವ ಮನೆ ಮಾಲೀಕನನ್ನು ಆಸ್ಪತ್ರೆಯಲ್ಲಿ ನೋಡಲು ರೈಲು ಹಿಡಿದು ಹೋಗುವ ಫಾತಿಮಳಾಗಿ, ಅನಾಥ ಹೆಣ್ಣು ಮಗಳೊಬ್ಬಳ ಹೆರಿಗೆಯ ಬ್ಯಾನೆಯಲ್ಲಿ ಜೊತೆ ನಿಲ್ಲುವ ದಿವಾಕರನಾಗಿ - ಈ ಕತೆಗಳಲ್ಲಿ ನಮಗೆ ಕಾಣುವುದು ಅಪ್ಪಟ ಬದುಕಿನ ಅನಂತ ಸಾಧ್ಯತೆಗಳು.

'ಎದೆ ಭೂಮಿಗೆ ಬರ ಬೀಳದಿರಲಿ' ಕತೆಯನ್ನೇ ನೋಡಿ - ಐದಾರು ವರ್ಷಗಳ ಹಿಂದೆ ವಿಜಾಪುರದ ಹತ್ತಿರದ ಹಳ್ಳಿಯೊಂದರಿಂದ ಗುಳೇ ಹೊರಟು ಬಸ್ಸಿಳಿದವರಲ್ಲಿ ಒಬ್ಬನಾದ ಬಸ್ಯಾ ಪುಣೆಯ ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿದ್ದಾನೆ. ತನ್ನ ಆಯೀ ಅನಾಥ ಮುಸಲ್ಮಾನ ಬಾಲಕನನ್ನು ಸಾಕುತ್ತಿರುವ ಸುದ್ದಿ ತಿಳಿದು ಊರಿಗೆ ಓಡುತ್ತಾನೆ. ತನಗೇ ಮೂರು ಹೊತ್ತಿನ ಗಂಜಿಗಿ ನೆಲಿ ಇಲ್ಲದ ಆಯಿ ಈ ಉಸಾಬರಿ ಮೈಮೇಲೆ ಹಾಕೊಂಡಿದ್ದು ಅವನಿಗೆ ಕೊಂಚವೂ ಇಷ್ಟವಾಗುವುದಿಲ್ಲ. ಆಯಿಯನ್ನು ಪುಣೆಗೆ ಕರೆದುಕೊಂಡು ಬಂದು ಬಿಡಬೇಕು ಎಂದು ಊರಿಗೆ ಬಂದು ಇಳಿಯುತ್ತಾನೆ. ಆಯಿಯೊಟ್ಟಿಗಿನ ಪುಟ್ಟ ಬಷೀರನನ್ನು ನೋಡುತ್ತಾನೆ. ತಂದೆ ತಾಯಿ ಯಾರಿಲ್ಲದ ತನ್ನನ್ನು ಬೆಳೆಸಿದ ಅಜ್ಜಿ ಈಕೆ. ಈಗ ನನ್ನ ಜಾಗವನ್ನು ಅವಳ ತೊಡೆಯ ಮೇಲೆ ಕತೆ ಕೇಳುತ್ತ ಮಲಗಿದ ಬಷೀರ ಆಕ್ರಮಿಸಿದಂತೆ ಕಂಡು, ಒಳಗೇ ಸಣ್ಣ ಅಸೂಯೆ. ಮುಸಲಮಾನ ಹುಡುಗನನ್ನು ಆಯಿ ಸಾಕುತ್ತಿರುವುದು ಇವತ್ತೆಲ್ಲ ನಾಳಿಕೆ ಏನರ ಗದ್ದಲಕ್ಕ ಮೂಲ ಎಂದು ನಂಬಿದ ಬಸೂ, ನಾಳೆ ಸಂಜಿಕೆ ಹೋಗೋಣು, ತಯಾರಾಗು ಎಂದು ಬಷೀರನನ್ನು ಬಿಟ್ಟು ತಾನೊಬ್ಬಳು ಬರುವಂತೆ ಒತ್ತಾಯಿಸುತ್ತಾನೆ. ಊರಿನಲ್ಲಿ ಬರ, ಕುಡಿಯುವ ನೀರಿಗೂ ಹಾಹಾಕಾರ. ಆಯಿಯನ್ನು ಪುಣೆಗೆ ಹೊರಡಿಸಲು ಯತ್ನಿಸುತ್ತಾನೆ. ಆಯಿ ಹೇಳುತ್ತಾಳೆ, 'ಭೂಮಿಗೆ ಬರ ಬೀಳವಲ್ದ್ಯಾಕ... ಮನಶ್ಯಾನ ಎದಿಗಿ ಬರ ಬಿಳಬಾರದು ತಿಳಿತಾ...' ಈ ಒಂದು ಸಾಲು ಇಡೀ ಕತೆಯ ಎಳೆಯಾಗುತ್ತದೆ, ಧ್ವನಿಯಾಗುತ್ತದೆ.

'ಒಟ್ಟ ಏನ ಹೇಳಿದ್ರೂ ನೀ ಆ ಹುಡುಗನ್ನ ಬಿಡಂಗಿಲ್ಲ ಅಂದಂಗಾತು. ನಿನಗ ನನಗಿಂತ ಆ ಹುಡುಗನೇ ಹೆಚ್ಚಾದನೇನು.

ಹುಡುಗ ಮುಸಲರ ಪೈಕಿ ಅದಾನ... ನಾಳೆ ಏನರ ಗದ್ದಲಕ್ಕ ಮೂಲ ಆಕ್ಕೈತಿ....' ಸಹನೆಗೆಟ್ಟು ಬಸ್ಸುಗೆ ಆಯಿಯ ಉತ್ತರ - 'ಏನ ಸರ್ತಿಗೊಮ್ಮೆ ಮುಸಲರ. ಹುಡುಗ ಅಂತ ಹಚ್ಚೀಯಲೇ... ನೀ ಅಷ್ಟ ಇದ್ದಾಗ ಹ್ಯಾಂಗ ಇದ್ದಿ ನೆಪ್ಪ ಮಾಡ್ಕ. ಅವನೂ ಹಂಗೇ ಅದಾನ. ನಿನಗ ಅವಗ ಏನ ಪರ್ಕ್ ಅದ. ನಿನಗೆ ಹೆಂಗೆ ಜೋಪಾನ ಮಾಡಿ ನಾಕಕ್ಷರ ಕಲಿಸೀನಿ ಹಂಗ ಅವಂಗೂ ನಾಕಕ್ಷರ ಕಲುಸ್ತಿನು. ತುಸು ದೊಡ್ಡಾಂವ ಆದಿಂದ ನಿನ್ನ ಹಂಗ ಎಲ್ಲಾರ ದುಡುಮಿ ಮಾಡ್ಕೋತ ತನ್ನ ದಾರಿ ತಾನ ನೋಡ್ಕೋತಾನು. ನಿನಗಿಷ್ಟು ಮಾಡೀನಿ ಅಂತ ನೀನೇನು ಈಗ ನನ್ನ ಅನುತನು ವಿಚಾರಿಸ್ತೀಯೇನಪ್ಪ.... ಈಗ ಲಗ್ನ ಆಗಿ ಎರ್ಡು ಮೂರು ವರ್ಸದಾಗ ನೀ ಎಷ್ಟ ಸರ್ತಿ ಊರಿಗಿ ಬಂದೀ ? ಮೂರು ತಿಂಗಳ ಹಿಂದೆ ಜ್ವರ ಕೆಮ್ಮು ಜೋರಾಗಿ ಹದಿನೈದು ದಿನ ಹಾಸಿಗಿ ಹಿಡಿದಾಗ ಟಪಾಲು ಹಾಕ್ಸಿದ್ರೂ ಬರಲಿಲ್ಲ ನೀ.... ಕಳ್ಳುಬಳ್ಳಿ ಅಂತ ನಾ ಎಷ್ಟ ಬಡಕಂಡು ಮಾಡಿದ್ನಲ್ಲ, ಎಲ್ಲಿ ಕಳ್ಳುಬಳ್ಳಿಯಪ್ಪ...' ಎನ್ನುತ್ತಲೇ 'ನೀ ನನ್ನ ಕಾಳಜಿ ಮಾಡಬಕು ಅಂತ ನಾ ನಿನ್ನ ಜೋಪಾನ ಮಾಡಿರಲಿಲ್ಲ, ನನ್ನ ಕರ್ತವ್ಯ ಅಂತ ತಿಳಿದು ಮಾಡೀನಿ. ಹಂಗ ಈ ಹುಡುಗ ಈಗ ಜೋಡ ಆಗ್ಯಾನ....' ಆಯಿಯ ಮಾತುಗಳು ಅಷ್ಟು ವರ್ಷಗಳ ಅವರ ಬದುಕಿನ ಇಡೀ ಕತೆಯನ್ನು ಒಂದು ಪ್ಯಾರಾದಲ್ಲಿ ತೆರೆದಿಟ್ಟುಬಿಡುತ್ತವೆ. ಅಷ್ಟೇ ಅಲ್ಲ ಅಬ್ಬರ, ಆಡಂಬರ ಏನೊಂದೂ ಇಲ್ಲದೆಯೇ ಧರ್ಮ ಧರ್ಮಗಳ ನಡುವಿನ ಮನುಷ್ಯ ನಿರ್ಮಿತ ಗೆರೆಗಳನ್ನು ಕ್ಷಣದಲ್ಲಿ ಅಳಿಸಿ ಹಾಕಿ ಬಿಡುತ್ತವೆ. ಆಕೆ ಹೇಳುವ ಒಂದು ಮಾತು 'ಎಲ್ಲ ಸರಳ ಇರ್ತದ... ಮನಸ್ಸನಾಗ ಕಶ್ಮಲ ಇರ್ತದಲ್ಲ, ಆವಾಗ ಎಲ್ಲಾನೂ ಜಟಿಲ ಎನಿಸ್ತದ....' ಸ್ಪಷ್ಟ ಸತ್ಯವನ್ನು ಅತ್ಯಂತ ಸರಳವಾಗಿ ಸದ್ದಿಲ್ಲದೆ ನಮ್ಮೆದೆಗೆ ಇಳಿಸುತ್ತದೆ.

ಅಂದೇ ರಾತ್ರಿ ಮಲ್ಲಣ್ಣನ ಹೆಂಡತಿಗಿ ಹೆರಿಗೆ ಬ್ಯಾನಿ ಬಂದು ಬಸ್ಸೂ, ಮಲ್ಲಣ್ಣ ಎಲ್ಲರೂ ಆಸ್ಪತ್ರೆಯಲ್ಲಿದ್ದಾರೆ. ಅಂದಹಾಗೆ, ಇವರ ಕತೆಗಳಲ್ಲಿ ಹೆರಿಗೆ ಆಸ್ಪತ್ರೆಯ ಚಿತ್ರಗಳು ಅನೇಕ ಬಾರಿ ಮೂಡಿ ಬಂದಿವೆ. ಈ ಚಿತ್ರಗಳು ಎಷ್ಟು ಗಾಢವಾಗಿವೆ ಎಂದರೆ, ಮೂಗಿಗೆ ಫಿನೈಲ್ ವಾಸನೆ, ಬಸುರಿ, ಬಾಣಂತಿಯರು ಹೊದ್ದ ಛಾದರದ ಕಮಟು ವಾಸನೆ ಬಡಿಯುವಷ್ಟು ಗಾಢವಾಗಿದೆ. ಮಲ್ಲಣ್ಣನ ಹೆಂಡತಿ ಶಾಂತಾ ಆಗಷ್ಟೆ ಕೂಸು ಹೆತ್ತು ಮಲಗಿದಾಗ, ಬಸೂ ಮಲ್ಲಣ್ಣ ಇಬ್ಬರೇ ಮಾತನಾಡುತ್ತ ಕುಳಿತ ಗಳಿಗೆಯಲ್ಲಿ ಮಗುವೊಂದು ಚೀರಿ ಚೀರಿ ಅಳುತ್ತಿದೆ. ಹಿಂದಿನ ರಾತ್ರಿಯಷ್ಟೇ ಹುಟ್ಟಿದ ಹಸುಗೂಸು. ತಾಯಿಗೆ ಇನ್ನೂ ಮೊಲೆಹಾಲು ಬಂದಿಲ್ಲ. ಕೂಸಿನ ಅಜ್ಜಿ ಅದನ್ನೆತ್ತಿಕೊಂಡು ತಿರುಗಾಡುವಾಗ ಶಾಂತಾನ ಎದುರಿನ ಬಾಣಂತಿ 'ಅಯ್ಯಾ.... ಅದಕ್ಯಾಕ ಇಷ್ಟ ಅಳಸ್ತೀ.... ತಾರಬೇ ಇಲ್ಲಿ' ಎಂದವಳೇ ತೊಡೆಯ ಮೇಲೆ ಆದೇ ಹಾಲು ಕುಡಿದು ಸುಖನಿದ್ದೆಯಲ್ಲಿದ್ದ ತನ್ನ ಮಗುವನ್ನು ಪಕ್ಕದಲ್ಲಿ ಮಲಗಿಸಿ, ಅಳುತ್ತಿರುವ ಕೂಸಿಗೆ ಇನ್ನೊಂದು ಮೊಲೆ ಕೊಟ್ಟು ಹಾಲೂಡಿಸತೊಡಗಿದ್ದಳು. ಅದನ್ನು ನೋಡಿದ ಮಲ್ಲಣ್ಣ 'ಹಿಂಗ ಯಾ ಕೂಸು ಏನು ಎತ್ತ ಅಂತ ವಿಚಾರ ಮಾಡಲಾರದ ಮಡಿಲಾಗ ಹಾಕ್ಕೊಳೊದು ಹೆಣಮಕ್ಕಳಿಗಿ ಯಾಕ ಸಾಧ್ಯ ಆಗ್ತದ ಅಂತ ಇವತ್ತ ಗೊತ್ತಾತು ನೋಡು..,.. ಮಲಿಹಾಲು ಕುಡಿಸೂ ತಾಯಿಗಿ ಎಲ್ಲ ಕೂಸುಗಳೂ ತನ್ನದೇ ಅಂತ ಭಾವನಾ ಇರ್ತದ. ನಮಗೆ ಗಂಡುಮಕ್ಕಳಿಗಿ ಹಿಂಗ ಸಾಧ್ಯನ ಆಗಂಗಿಲ್ಲ ನೋಡು ಬಸೂ' ಅಚ್ಚರಿಯಿಂದೆಂಬಂತೆ ಉದ್ಗರಿಸಿದ್ದ. ಬಸೂಗೆ ಕೂಡ ಸೋಜಿಗವೆನ್ನಿಸಿತ್ತು. ಆ ಇಡೀ ದೃಶ್ಯ ಎಷ್ಟು ಸಹಜವಾಗಿತ್ತೆಂದರೆ ಆ ಚೌಕಟ್ಟಿನಲ್ಲಿ ಕುಳಿತ ಇವರಿಬ್ಬರೇ ಅಸಹಜವೆನ್ನುವ ಹಾಗೆ.

ಇವರ ಕೆಲವು ಕತೆಗಳಲ್ಲಿ ಕಾಣುವ ಇಂತಹ ಅದ್ಭುತ ಚಿತ್ರಗಳನ್ನು ಓದುವಾಗ, ಅನೇಕ ಲೇಖಕಿಯರ ಅತ್ಯುತ್ತಮ ಕತೆಗಳನ್ನು ಓದಿದಾಗ ಅನಿಸಿದಂತೆಯೇ, ಕನ್ನಡ ಕಥಾಲೋಕ ಇಂತಹ ಸ್ತ್ರೀ ಸ್ಪರ್ಶವಿಲ್ಲದೆ ಅದೆಷ್ಟು ಕಾಲ ಬಡವಾಗಿತ್ತು ಅನಿಸಿಬಿಟ್ಟಿತು. ಸ್ತ್ರೀ ಪುರುಷರಿಬ್ಬರ ಅನುಭವಗಳು ಒಟ್ಟುಗೂಡಿದಾಗ ಮಾತ್ರ ಅಲ್ಲಿ ಪೂರ್ಣತೆ ಸಾಧ್ಯ.

ಎದೆ ಭೂಮಿಗೆ ಬರಬೀಳದಿರಲಿ' - ಈ ಕತೆಯ ಕೊನೆ ಕೂಡಾ, ಕತೆಯ ಅತಿ ಸಹಜ ತಿರುವೆಂಬಂತೆ ಹೊರಳುತ್ತದೆ. ಬಸೂ, 'ನಾಳಿಗಿ ನೀವೂ ತಯಾರಾಗ್ರಬೇ' ಎಂದವನೇ ಪಡಸಾಲೆಯ ಹೊರಗಿನ ಮೆಟ್ಟಲ ಮೇಲೆ ಕುಳಿತು ಏನೋ ಆಟದಲ್ಲಿ ತಲ್ಲೀನನಾಗಿದ್ದ ಆ ಹುಡುಗನತ್ತ ತಿರುಗಿ 'ಏ ಬಷೀರ.... ಬರ್ತಿ ಇಲ್ಲೋ ಪುಣೀಕ... ಅಲ್ಲಿಸಾಲಿಗಿ ಹೋಗಬಕು ಮಗನೇ... ಆಟಗೀಟ ಎಲ್ಲ ಇನ್ನ ಬಂದ್' - ಈ ಒಂದು ವಾಕ್ಯದಲ್ಲಿ, ಮನುಷ್ಯ ಮನುಷ್ಯನ ನಡುವೆ ನಿಂತಿದ್ದ ಜಾತಿ ಧರ್ಮದ ಗೋಡೆಗಳು ಕುಸಿಯುತ್ತವೆ. ಬಗ್ಗಡವಾಗಿದ್ದ ಮನಸ್ಸುಗಳು ತಿಳಿಯಾಗುತ್ತವೆ.

ಇಲ್ಲಿಯ ಮಾನವೀಯ ನೆಲೆಯ ಕ್ರಾಂತಿಗಳೆಲ್ಲ ಸದ್ದಿಲ್ಲದೆ ಮಾನವೀಯ ನೆಲೆಯಲ್ಲಿ ನಡೆದು ಹೋಗುತ್ತವೆ. ಅತ್ಯಂತ ಸಹಜವೆಂಬಂತೆ, ಇದರ ಹೊರತಾದ, ಗೀಟು ಎಳೆದ ಧರ್ಮ ಧರ್ಮಗಳ ನಡುವಿನ ಗೆರೆಗಳೆಲ್ಲ ಅಸಹಜ ಮತ್ತು ಕೃತಕವೆಂಬ ಬದುಕಿನ ಚಿತ್ರಗಳನ್ನು ಸುಮಂಗಲ ತೆರೆದಿಡುತ್ತಾರೆ. ಇಂತಹುದೇ ಚಿತ್ರ 'ಫಾತಿಮಾಗೆ ಮಳೆಯೆಂದರೆ ಇಷ್ಟ' ಎಂಬ ಕತೆಯಲ್ಲಿ ಮೂಡುತ್ತದೆ. ಹಿಂದು ಮನೆಯಲ್ಲಿ ಕೆಲಸ ಮಾಡುವ ಫಾತಿಮಾಳ ಚಿತ್ರ. ಎಲ್ಲಿಯೂ ಘೋಷಣೆಯಾಗದೆ, ಬದುಕಿನಲ್ಲಿ ಹದವಾಗಿ ಬೆರೆತು ಹೋಗುವ ಮಾನವೀಯ ಸಂಬಂಧಗಳು ಇಲ್ಲಿವೆ.

ಒಟ್ಟಿನಲ್ಲಿ ಸುಮಂಗಲ ಕನ್ನಡದ ಕತಾಲೋಕಕ್ಕೆ ಕಾಲಿಟ್ಟಿರುವ ಬಲು ಸಮರ್ಥ ಕತೆಗಾರ್ತಿ. ಬದುಕನ್ನು ಒಳ ಕಣ್ಣುಗಳಿಂದ ಕಾಣಬಲ್ಲ ಸೂಕ್ಷ್ಮತೆ, ಹೊರ ಕಣ್ಣುಗಳಿಂದ ನೋಡಬಲ್ಲ ಅವಲೋಕನ ಶಕ್ತಿ ಕಂಡ ಬದುಕನ್ನು ಅತ್ಯಂತ ಕುಶಲತೆಯಿಂದ ಹೆಣೆದು ಕತೆಯಾಗಿಸಬಲ್ಲ ಕಸುಬುಗಾರಿಕೆ - ಇವೆಲ್ಲವೂ, ಸುಮಂಗಲರಲ್ಲಿವೆ. ಬದುಕಿನ ಅನಂತ ಸಾಧ್ಯತೆಗಳನ್ನು ತೋರಿಸುವ ಈ ಕತೆಗಳು, ಬರ ಬಿದ್ದ ಎದೆಯನ್ನೂ ಜುಮುರು ಮಳೆಯಾಗಿ ತೋಯಿಸಬಲ್ಲುವು.

CPMG/KA/BG-8/2003-05 RNI No. 45577/88

Posted at Basavanagudi P.O. On the 25th of every Month

ಶಾಂತಿ ಗೀತೆ

ಅಮೇರಿಕ ದೇಶದ ಯುದ್ಧದ ಕರೆಯನು
ವಿರೋಧಿಸೋಣ ನಾವ್ ಜನರೆ
ಸಾಮ್ರಾಜ್ಯ ಶಾಹಿಯ ತೈಲದ ದಾಹಕೆ
ಇನ್ನೆಷ್ಟು ಬಲಿ ಹೇಳಿ ನೀವುಗಳೆ.

ಶಾಂತಿಗೆ ನೀವೊಂದು ಅವಕಾಶ ನೀಡಿರಿ
ಯುದ್ಧದ ಕರೆಯನು ಖಂಡಿಸಿರಿ
ಒದುಕನು ಪ್ರೀತಿಸಿ, ಗಾಂಧಿಯ ಸ್ಮರಿಸಿ
ಬುದ್ಧನ ನೆಲದ ನಿವಾಸಿಗಳೆ.

ಬಿನ್‌ಲಾಡನ್ ಸದ್ದಾಮರು, ಹುಟ್ಟಲಿಲ್ಲ ಗರ್ಭದಲ್ಲೆ
ಸೃಷ್ಟಿಸಿದರು ಇವರು ನಮ್ಮ ದೊಡ್ಡಣ್ಣರು
ಅಸ್ತ್ರಶಸ್ತ್ರ ಮಾರಿ ಮೆರೆದು, ಲಾಭ ದೋಚಿಕೊಂಡರಿವರು
ಆತಂಕವಾದಕ್ಕೆ ಜನ್ಮ ಇತ್ತರು.

ನೆರೆಮನೆಗಿಟ್ಟ ಕೊಳ್ಳಿ, ಸುಟ್ಟಿತವರ ಮನೆಯನ್ನೆ
ಕುಸಿಯಿತು ವಾಣಿಜ್ಯ ಗೋಪುರವು
ಆತಂಕ ವಾದದ ನೆಪ ಹಿಡಿದು, ಕುದುರೆ ಏರಿ
ಕಾಳಗಕ್ಕೆಕ ಹೊರಟನಪ್ಪ ಸರದಾರನು.

ವಿಶ್ವಕ್ಕೆಲ್ಲ ಅಸ್ತ್ರ ಹಂಚಿ, ಶಾಂತಿಯನ್ನು ಮೂಲೆಗಟ್ಟಿ
ಇರಾಕಲ್ಲಿ ಕೊಂದರಿವರು ಸಾವಿರಾರು ಮಕ್ಕಳ
ನಿಲ್ಲದಿವರ ಅಟ್ಟಹಾಸ, ಯುದ್ಧದ ದಾಹ ವಿಪರೀತ
ಸಿರಿಯಾ ಕೊರಿಯಾ ದಂಡಯಾತ್ರೆ ಹೋಗಲಿಹರು.

ಸಾವಿರ ಸಾವಿರ ಸಂಖ್ಯೆಯಲ್ಲಿ, ಶಾಂತಿಗಾಗಿ ಕೂಗಿದರೂ
ಕಿವುಡ ರಾಜನಿವನು ನೋಡಿ, ಕೇಳಲೊಲ್ಲನು
ಕಂದಗಳ ಕಣ್ಣ ಕನಸ, ಉಳಿಸಲೆಂದು ಕೂಡಿ ಬನ್ನಿ
ಯುದ್ಧವನ್ನು ತಡೆಯಲೆಂದು ಓಡಿಬನ್ನಿರಿ
ಯುದ್ಧವನ್ನು ತಡೆಯಲೆಂದು ಓಡಿಬನ್ನಿರಿ.

— ನೇಮಿಚಂದ್ರ

"Achala" 108, Skyline Surabhi,
14 - P, Vidyapeeta Road,
BSK III Stage,
Bangalore - 560 085

To : Smt/Sri